# ಹಂಪಿ ಟೈಮ್ಸ್

HAMPI TIMES

ಕನ್ನಡ ದಿನಪತ್ರಿಕೆ
KANNADA DAILY


ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA

epaper.hampitimes.com | e-mail: hampitimes@gmail.com | M:94486 33038 Reg.No.PMG/KA/NK/BLY/01/2024-2026

ಸಂಪುಟ:02 Volume:02 • ಸಂಚಿಕೆ: 220 Issue: 220 • ಪಿ.ಆರ್.ಜಿ.ಐ.ನಂ.:KARKAN/2023/88055 PRGI No:KARKAN/2023/88055 • ವಿಜಯನಗರ VIJAYANAGARA • 06.03.2025 • ಗುರುವಾರ Thursday • ಪುಟ:04 Page:04 • ಬೆಲೆ:2 Rs:2






## ದೇವಾಲಯ ದರ್ಶನ



ಹಂಪಿ ಶ್ರೀ ವಿರೂಪಾಕ್ಷೇಶ್ವರ ದರ್ಶನ

ನಿತ್ಯ ಅಭಿಷೇಕ ಸಮಯ
ಬೆಳಿಗ್ಗೆ: 6:30, 10:30 ಸಂಜೆ 6:30ಕ್ಕೆ

-: ದರ್ಶನ ಸಮಯ :-
ಬೆಳಿಗ್ಗೆ 6.30 ರಿಂದ ಮಧ್ಯಾಹ್ನ 1.15ರವರೆಗೆ
ಮಧ್ಯಾಹ್ನ 3 ರಿಂದ ರಾತ್ರಿ 7.30ರವರೆಗೆ

**Call Us for Advertisements**
Good Opportunity for Branding

ನಿಮ್ಮೂರ ಜಾತ್ರೆ ಉತ್ಸವಕ್ಕೆ ಸ್ವಾಗತ/ಶುಭಾಶಯ ಕೋರಲು ಬಯಸುತ್ತೀರಾ?
ಇಂದೇ ಸಂಪರ್ಕಿಸಿ
M:9448633038
ಕೊನೆ ಕ್ಷಣದವರೆಗೆ ಕಾದು ನಿರಾಶರಾಗಬೇಡಿ!
ಮೊದಲು ಬುಕ್ಕಿಂಗ್ ಮಾಡಿದವರಿಗೆ ಮೊದಲ ಆದ್ಯತೆ

**ಹಂಪಿ ಟೈಮ್ಸ್**
ವಿಜಯನಗರದ ಹೆಮ್ಮೆ
ಕನ್ನಡ ದಿನಪತ್ರಿಕೆ
SSLC ವಿದ್ಯಾರ್ಥಿಗಳಿಗಾಗಿ
ಹೈಸ್ಕೋರ್ ಮತ್ತು ಸರಳ ಅಭ್ಯಾಸಕ್ಕೆ ತಜ್ಞ ಶಿಕ್ಷಕರಿಂದ ಸುಲಭ ಅಂಶಗಳು ನಿಮ್ಮ ಹಂಪಿ ಟೈಮ್ಸ್ ದಿನಪತ್ರಿಕೆಯಲ್ಲಿ
scan to read epaper
9 ಜುಲೈ 2024 ರಿಂದ ಪ್ರತಿದಿನ
ನಿಮ್ಮ ಮೊಬೈಲ್‌ನಲ್ಲಿ ಸ್ಕ್ಯಾನ್ ಮಾಡಿ ಇನ್ಸ್ಟಾಲ್ ಮಾಡಿಕೊಳ್ಳಿ!


# ಉನ್ನತ ಬದುಕಿಗೆ ಶಿಕ್ಷಣವೇ ಅಡಿಪಾಯ

## ಕನ್ನಡ ವಿವಿ ಕುಲಪತಿ ಡಾ.ಡಿ.ವಿ.ಪರಮಶಿವಮೂರ್ತಿ ಹೇಳಿಕೆ | ಅಲ್ಪಸಂಖ್ಯಾತರ ಬಾಲಕರ ವಸತಿ ನಿಲಯ ಉದ್ಘಾಟನೆ




■ ಹಂಪಿ ಟೈಮ್ಸ್ ಹೊಸಪೇಟೆ

ವಿದ್ಯಾ ಸಂಸ್ಥೆಗಳಲ್ಲಿ ಕಲಿಯುತ್ತಿರುವ ವಿದ್ಯಾರ್ಥಿಗಳೆಲ್ಲ ಒಂದೇ. ನಾವೆಲ್ಲ ಒಂದೇ ಎಂಬ ಭಾವನೆಯಿಂದ ವಿದ್ಯಾರ್ಥಿಗಳಿರಬೇಕು. ಯಾವುದೇ ಪ್ರತ್ಯೇಕತೆಯ ಭಾವ ನಿಮ್ಮಲ್ಲಿರಬಾರದು ಎಂದು ಕನ್ನಡ ವಿಶ್ವವಿದ್ಯಾಲಯದ ಕುಲಪತಿ ಡಾ.ಡಿ.ವಿ.ಪರಮಶಿವಮೂರ್ತಿ ಅಭಿಪ್ರಾಯ ಪಟ್ಟರು.

ಕನ್ನಡ ವಿಶ್ವವಿದ್ಯಾಲಯ, ಹಂಪಿ ಅಲ್ಪಸಂಖ್ಯಾತರ ಮೆಟ್ರಿಕ್ ನಂತರದ, ಬಾಲಕರ ವಸತಿ ನಿಲಯವನ್ನು ಬುಧವಾರ ಉದ್ಘಾಟಿಸಿ, ಮಾತನಾಡುತ್ತಾ, ದೇಶದಲ್ಲಿ ಅಲ್ಪಸಂಖ್ಯಾತರಿಗೆ ಗಾಬರಿ ಬೆದರಿಕೆಯ ವಿಷಮ ಪರಿಸ್ಥಿತಿಗಳು ಸೃಷ್ಟಿಯಾಗುತ್ತಿವೆ. ಇದಕ್ಕೆ ಹಲವು ಕಾರಣಗಳಿವೆ. ಇದರಲ್ಲಿ, ನಿಜ ಎಷ್ಟೋ, ಸುಳ್ಳು ಎಷ್ಟೋ, ಗೊಂದಲವೆಷ್ಟೋ ಗೊತ್ತಿಲ್ಲ. ಇವುಗಳಿಗೆ ಕನ್ನಡ ವಿಶ್ವವಿದ್ಯಾಲಯದ ಅಲ್ಪಸಂಖ್ಯಾತ ವಿದ್ಯಾರ್ಥಿಗಳು ಗಮನ ಕೊಡದೆ, ಶಿಕ್ಷಣಕ್ಕೆ ಹೆಚ್ಚಿನ ಒತ್ತು ನೀಡಬೇಕು. ಸರ್ಕಾರ ಸಂವಿಧಾನದ ಮೀಸಲಾತಿ ಮತ್ತು ಸಾಮಾಜಿಕ ನ್ಯಾಯದ ತತ್ವದ ಅಡಿಯಲ್ಲಿ ಉನ್ನತ ಶಿಕ್ಷಣ ಪಡೆಯುವ ವಿದ್ಯಾರ್ಥಿಗಳಿಗೆ ಪ್ರತ್ಯೇಕ ಅನುದಾನದ ಅಡಿಯಲ್ಲಿ ಹಾಸ್ಟೆಲ್ ವ್ಯವಸ್ಥೆ ಮಾಡುತ್ತದೆ. ಅಲ್ಪಸಂಖ್ಯಾತರ ಮೆಟ್ರಿಕ್ ನಂತರದ ಬಾಲಕರ ಹಾಸ್ಟೆಲ್‌ಗೆ ಬೇಕಾದ ಮೂಲಭೂತ ಸೌಕರ್ಯಗಳನ್ನು ಈಗಾಗಲೇ ವಿಶ್ವವಿದ್ಯಾಲಯವು ತನ್ನ ಆರ್ಥಿಕ ಇತಿ ಮಿತಿಯಲ್ಲಿ ಕಲ್ಪಿಸಿದೆ. ಕಾಲಕಾಲಕ್ಕೆ ಸರ್ಕಾರದಿಂದ ಇನ್ನು ಬೇಕಾದ ಸೌಲಭ್ಯಗಳನ್ನು ಹಾಸ್ಟೆಲ್‌ಗೆ ಲಭಿಸಲು ವಿಶ್ವವಿದ್ಯಾಲಯವು ಕೆಲಸ ಮಾಡಲು ಬದ್ಧವಾಗಿದೆ. ಇದಕ್ಕೆಲ್ಲ ಕಾರಣವಾಗಿರುವ ಸರ್ಕಾರದ ಎಲ್ಲ ಅಧಿಕಾರಿಗಳು, ವಿಶ್ವವಿದ್ಯಾಲಯದ ಸಿಬ್ಬಂದಿಗಳು ಹಾಗೂ ಹಾಸ್ಟೆಲಿನ ವಿದ್ಯಾರ್ಥಿಗಳು ಎಂದು ನುಡಿದರು.

ಈ ಕಾರ್ಯಕ್ರಮದಲ್ಲಿ ಕನ್ನಡ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳ ಕ್ಷೇಮಪಾಲನಾಧಿಕಾರಿಗಳಾದ ಡಾ. ವೆಂಕಟಗಿರಿ ದಳವಾಯಿ ಅವರು ಮಾತನಾಡುತ್ತಾ, ಅಲ್ಪಸಂಖ್ಯಾತ ಸಮುದಾಯಗಳು ಉನ್ನತ ಶಿಕ್ಷಣದಲ್ಲಿ ಬಾಳ ಹಿಂದೆ ಉಳಿದಿವೆ. ಒಬ್ಬ ಅಲ್ಪಸಂಖ್ಯಾತ ವಿದ್ಯಾರ್ಥಿ ಪರಿಶ್ರಮ ನಿಷ್ಠೆಯಿಂದ ಶಿಕ್ಷಣ ಪಡೆದು ಯಶಸ್ವಿಯಾದರೇ ಅವನಿಂದ ಇಡೀ ಅವನ ಮನೆತನ ಅಲ್ಲದೇ ಅವನ ಮುಂದಿನ ಪೀಳಿಗೆಯೂ ಉನ್ನತವಾದ ಬದುಕು ಪಡೆಯುತ್ತದೆ. ಈ ಎಚ್ಚರಿಕೆ ಸದಾ ವಿದ್ಯಾರ್ಥಿಗಳಿಗೆ ಇರಬೇಕೆಂದು ಎಂದರು.

ಕನ್ನಡ ವಿಶ್ವವಿದ್ಯಾಲಯದ ಹಿಂದುಳಿದ ವರ್ಗಗಳ ಅಲ್ಪಸಂಖ್ಯಾತರ ವಿಶೇಷ ಘಟಕದ ಸಂಯೋಜನಾದಿ ,ಕಾರಿಗಳಾದ ಡಾ.ಎಸ್.ಆರ್. ಚನ್ನವೀರಪ್ಪ, ವಿಜಯನಗರ ಜಿಲ್ಲೆಯ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ತಾಲೂಕ ಅಧಿಕಾರಿಗಳಾದ ಎಸ್.ಸುದೀಪಕುಮಾರ ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

# ಅಳಿವಿನಂಚಿನಲ್ಲಿರುವ ವನ್ಯಜೀವಿ-ಸಸ್ಯ ಪ್ರಭೇದಗಳ ಸಂರಕ್ಷಣೆ ಅಗತ್ಯ

■ ಹಂಪಿ ಟೈಮ್ಸ್ ಕೊಟ್ಟೂರು

ಅಳಿವಿನಂಚಿನಲ್ಲಿರುವ ಪ್ರಭೇದಗಳಾದ ವನ್ಯಜೀವಿ ಮತ್ತು ಸಸ್ಯವರ್ಗದ ಅಂತರ ರಾಷ್ಟ್ರೀಯ ವ್ಯಾಪಾರದ ಸಮಾವೇಶಕ್ಕೆ ಸಹಿ ಹಾಕಿದ ದಿನವಾಗಿ ಈ ದಿನವು ಮಹತ್ವದ್ದಾಗಿದೆ ಎಂದು ಪ್ರಾಚಾರ್ಯರಾದ ಡಾ. ಎಂ.ರವಿಕುಮಾರ್ ಹೇಳಿದರು.

ಪಟ್ಟಣದ ಕೊಟ್ಟೂರೇಶ್ವರ ಕಾಲೇಜ್ ನಲ್ಲಿ ವಿಶ್ವ ವನ್ಯಜೀವಿಗಳ ದಿನಾಚರಣೆ ನಿಮಿತ್ತ ಪ್ರಾಣಿಶಾಸ್ತ್ರ ವಿಭಾಗದಲ್ಲಿ ಸಸ್ಯಶಾಸ್ತ್ರ ವಿಭಾಗ ಹಾಗೂ ಐ.ಕ್ಯೂ.ಎ.ಸಿ, ಎನ್.ಸಿ.ಸಿ, ಎನ್.ಎಸ್ ಎಸ್, ಸೈನ್ಸ್ ಫೋರಂ, ಆರ್ ಎನ್ ಡಿ, ಸಂಯೋಜನೆಯೊಂದಿಗೆ ನಡೆದ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದರು. ಆಹಾರ, ಇಂಧನ, ಔಷಧ, ವಸತಿ ಮತ್ತು ಬಟ್ಟೆಗಳಿಂದ ಹಿಡಿದು ನಮ್ಮ ಅಗತ್ಯಗಳನ್ನು ಪೂರೈಸಲು ಎಲ್ಲೆಡೆ ಜನರು ವನ್ಯಜೀವಿ ಮತ್ತು ಜೀವವೈವಿಧ್ಯ ಆಧಾರಿತ ಸಂಪನ್ಮೂಲಗಳನ್ನು ಅವಲಂಬಿಸಿದ್ದಾರೆ. ಪ್ರಕೃತಿ ನಮಗೆ ಮತ್ತು ನಮ್ಮ ಗ್ರಹಕ್ಕೆ ತರುವ ಪ್ರಯೋಜನಗಳು ಮತ್ತು ಸೌಂದರ್ಯವನ್ನು ಆನಂದಿಸಲು, ಪರಿಸರ ವ್ಯವಸ್ಥೆಗಳು ಅಭಿವೃದ್ಧಿ ಹೊಂದಲು ಮತ್ತು ಸಸ್ಯ ಮತ್ತು ಪ್ರಾಣಿ ಪ್ರಭೇದಗಳು ಭವಿಷ್ಯದ ಪೀಳಿಗೆಗೆ ಅಸ್ತಿತ್ವದಲ್ಲಿರಲು ಜನರು ಒಟ್ಟಾಗಿ ಕೆಲಸ ಮಾಡಬೇಕು ಎಂದರು.

ವೇದಿಕೆಯಲ್ಲಿ ರಾಧಾ ಸ್ವಾಮಿ ಕೆ.ಪಿ, ಡಾ. ಚೇತನ್ ಚೌಹಾನ್, ಡಾ. ಸ್ವಾಮಿ ಆರಾಧ್ಯ ಮಠ, ಶ್ರೀ ಕೊಟ್ರೇಶ್, ಉಪನ್ಯಾಸಕರಾದ ಪ್ರತಿಮಾ ಎಂ.ಎಸ್, ಎಂ. ಗಗನಶ್ರೀ, ಎಂ. ನಂದಿತಾ ಉಪಸ್ಥಿತರಿದ್ದರು.

ಪ್ರಾಣಿ ಶಾಸ್ತ್ರ ವಿಭಾಗದ ಮುಖ್ಯಸ್ಥ ಡಾ. ಪೃಥ್ವಿರಾಜ್ ಸಿ. ಬಿ. ಪ್ರಾಸ್ತಾವಿಕ ಮಾತನಾಡಿದರು. ಸ್ವಾಗತ ವಿದ್ಯಾರ್ಥಿನಿ ಭೂಮಿಕ ಎಚ್.ಎಸ್, ಮಾಂತೇಶ್, ಸುಕನ್ಯ, ರುಚಿಶ್ರೀ, ಮಹಮ್ಮದ್ ಕೈಫ್, ಪ್ರಾರ್ಥನೆ ನಯನ. ಎಂ. ಎಲ್ಲಾ ಬೋಧಕ ಬೋಧಕೇತರ ಸಿಬ್ಬಂದಿ ಮತ್ತು ವಿದ್ಯಾರ್ಥಿಗಳು ಇದ್ದರು.



## ಅಂತರ ಜಿಲ್ಲಾ ಯುವ ವಿನಿಮಯ ಕಾರ್ಯಕ್ರಮದಲ್ಲಿ ಪ್ರೊ.ಎಂ.ಮುನಿರಾಜು ಹೇಳಿಕೆ

# ಸಾಂಸ್ಕೃತಿಕ ಕಲೆಗಳು ವಿನಿಮಯವಾಗಲಿ




■ ಹಂಪಿ ಟೈಮ್ಸ್ ಬಳ್ಳಾರಿ

ಶೈಕ್ಷಣಿಕ ರಂಗದಲ್ಲಿ ರಾಜ್ಯದೆಲ್ಲೆಡೆ ಇರುವ ವೈವಿಧ್ಯಮಯ ಸಾಂಸ್ಕೃತಿಕ ಕಲೆಗಳು ಯುವ ಸಮುದಾಯಕ್ಕೆ ವಿನಿಮಯವಾಗಬೇಕು ಎಂದು ವಿಜಯನಗರ ಶ್ರೀಕೃಷ್ಣದೇವರಾಯ ವಿಶ್ವವಿದ್ಯಾಲಯದ ಕುಲಪತಿಗಳಾದ ಪ್ರೊ. ಎಂ.ಮುನಿರಾಜು ಅವರು ಹೇಳಿದರು.

ಬುಧವಾರ ಇಲ್ಲಿಯ ವಿಜಯನಗರ ಶ್ರೀಕೃಷ್ಣದೇವರಾಯ ವಿಶ್ವವಿದ್ಯಾಲಯದ ಜೀವ ವಿಜ್ಞಾನ ಸಭಾಂಗಣದಲ್ಲಿ ಭಾರತ ಸರ್ಕಾರ ಯುವ ಕಾರ್ಯ ಮತ್ತು ಕ್ರೀಡಾ ಸಚಿವಾಲಯದ ಮೈ ಭಾರತ್-ನೆಹರು ಯುವ ಕೇಂದ್ರ, ಬಳ್ಳಾರಿ ಹಾಗೂ ವಿಶ್ವವಿದ್ಯಾಲಯದ ವಿದ್ಯಾರ್ಥಿ ಕಲ್ಯಾಣ ಘಟಕದ ಸಂಯುಕ್ತಾಶ್ರಯದಲ್ಲಿ ಬಳ್ಳಾರಿ ಮತ್ತು ತುಮಕೂರು ಜಿಲ್ಲೆಗಳಲ್ಲಿ ನಡೆಯಲಿರುವ 5 ದಿನಗಳ “ಅಂತರ ಜಿಲ್ಲಾ ಯುವ ವಿನಿಮಯ” ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ರಾಜ್ಯವು ಹಲವಾರು ವೈವಿಧ್ಯಮಯ ಕಲೆಗಳ ತವರೂರಾಗಿದೆ. ನಮ್ಮಲ್ಲಿ ಪ್ರದೇಶವಾರು ವಿಭಿನ್ನ ಸಾಂಸ್ಕೃತಿಕ ಪರಂಪರೆಗಳನ್ನು ಕಾಣಬಹುದಾಗಿದ್ದು, ವಿದ್ಯಾರ್ಥಿಗಳಿಗೆ ಸಾಂಸ್ಕೃತಿಕ ಕಾರ್ಯಕ್ರಮಗಳು ವರದಾನ ವಾಗಿವೆ ಎಂದರು.

ದೇಶವು 2047ರ ಹೊತ್ತಿಗೆ ಶೇ.80 ಯುವಕರನ್ನು ಹೊಂದಲಿದೆ. ಯುವಕರು ತಮ್ಮಲ್ಲಿರುವ ಸಾಂಸ್ಕೃತಿಕ ಮತ್ತು ಶೈಕ್ಷಣಿಕ ಪ್ರತಿಭೆಗಳನ್ನು ವಿನಿಮಯ ಮಾಡಿಕೊಳ್ಳಬೇಕು ಎಂದು ತಿಳಿಸಿದರು.

ವಿಶ್ವವಿದ್ಯಾಯದ ಕುಲಸಚಿವರಾದ ಎಸ್.ಎನ್.ರುದ್ರೇಶ್ ಅವರು ಮಾತನಾಡಿ, ಉತ್ತರ ಕರ್ನಾಟಕವು ಜನಪದ ಕಲೆಗಳ ಬೀಡಾಗಿದೆ. ನಮ್ಮಲ್ಲಿಯ ದೇಸಿ ಕಲೆಗಳ ಕುರಿತು ಇಂದಿನ ಯುವಕರಿಗೆ ಅರಿವೇ ಇಲ್ಲ. ಅವುಗಳನ್ನು ಮುಂದಿನ ಪೀಳಿಗೆಗೆ ಕೊಂಡೊಯ್ಯುವ ಜವಾಬ್ದಾರಿ ಯುವಕರ ಮೇಲಿದೆ. ಶಿಕ್ಷಣದ ಜೊತೆಗೆ ಸಾಂಸ್ಕೃತಿಕ ಮೌಲ್ಯಗಳನ್ನು ನಾವು ರೂಢಿಸಿಕೊಳ್ಳಬೇಕಾಗಿದೆ ಎಂದು ಹೇಳಿದರು.

ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ನಿಕಟಪೂರ್ವ ಸದಸ್ಯರಾದ ಡಾ.ಹೆಚ್.ಸಿ ರಾಘವೇಂದ್ರ ಅವರು ಮಾತನಾಡಿ, ವಿದ್ಯಾರ್ಥಿಗಳ ಭವಿಷ್ಯದ ದೃಷ್ಟಿಯಿಂದ ಕೌಶಲ್ಯ ಆಧಾರಿತ ಶಿಕ್ಷಣ ಮಹತ್ವಪೂರ್ಣವಾಗಿದೆ. ಜನಪದ ಕಲೆಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದು ಕರೆ ನೀಡಿದರು.

ಈ ಸಂದರ್ಭದಲ್ಲಿ ನೆಹರು ಯುವ ಕೇಂದ್ರದ ಜಿಲ್ಲಾ ಅಧಿಕಾರಿಗಳಾದ ಮೊಂಟು ಪತ್ತಾರ್ ಪ್ರಾಸ್ತಾವಿಕವಾಗಿ ಮಾತನಾಡಿದರು. ವಿನಿಮಯ ಕಾರ್ಯಕ್ರಮದಲ್ಲಿ ಬಳ್ಳಾರಿ ವಿವಿಯಿಂದ 27 ವಿದ್ಯಾರ್ಥಿಗಳನ್ನು ತುಮಕೂರಿಗೆ ಹಾಗೂ ತುಮಕೂರು ವಿವಿಯಿಂದ 25 ವಿದ್ಯಾರ್ಥಿಗಳು ಬಳ್ಳಾರಿಯಲ್ಲಿ ಭಾಗವಹಿಸಿದ್ದಾರೆ.

ಈ ಸಂದರ್ಭದಲ್ಲಿ ವಿವಿಯ ವಿದ್ಯಾರ್ಥಿ ಕಲ್ಯಾಣ ಘಟಕ ನಿರ್ದೇಶಕರಾದ ಪ್ರೊ. ಶಶಿಕಾಂತ ಮಜಗಿ, ನೆಹರು ಯುವ ಕೇಂದ್ರ ಕಾರ್ಯಕ್ರಮ ಅಧಿಕಾರಿಗಳಾದ ರಾಮ್‌ರಾವ್ ಬಿರಾದಾರ್ ವೇದಿಕೆಯಲ್ಲಿದ್ದರು.

ನಾಟಕ ಹಾಗೂ ಪ್ರದರ್ಶನ ಕಲೆ ವಿಭಾಗದ ಡಾ.ಅಣ್ಣಾಜಿ ಕೃಷ್ಣಾರೆಡ್ಡಿ ತಂಡದಿಂದ ಸಂಗೀತ ಕಾರ್ಯಕ್ರಮ ಪ್ರಸ್ತುತಪಡಿಸಲಾಯಿತು. ಐದು ದಿನಗಳ ವಿನಿಮಯ ಕಾರ್ಯಕ್ರಮದಲ್ಲಿ ವಿವಿಧ ಸಾಂಸ್ಕೃತಿಕ ಪ್ರದರ್ಶನಗಳನ್ನು ವಿದ್ಯಾರ್ಥಿಗಳು ನೀಡಲಿದ್ದಾರೆ.

ಕಾರ್ಯಕ್ರಮವನ್ನು ಡಾ.ಶಶಿಧರ ಕೆಲ್ಲೂರು ನಿರೂಪಿಸಿದರು. ಈ ಸಂದರ್ಭದಲ್ಲಿ ವಿವಿಧ ನಿಕಾಯಗಳ ಡೀನರು, ವಿಭಾಗಗಳ ಮುಖ್ಯಸ್ಥರು, ಬೋಧಕರು, ಸಂಶೋಧನಾ ವಿದ್ಯಾರ್ಥಿಗಳು, ಬೋಧಕೇತರ ಸಿಬ್ಬಂದಿ ಮತ್ತು ವಿದ್ಯಾರ್ಥಿಗಳು ಹಾಜರಿದ್ದರು.

## ಮೈಕ್ರೋ ನ್ಯೂಸ್

### ಕೋಳಿಶೀತ ಜ್ವರ ವಿವಿಧೆಡೆ 6 ತಪಾಸಣೆ ಕೇಂದ್ರ ಸ್ಥಾಪನೆ

**ಹಂಪಿ ಟೈಮ್ಸ್ ಬಳ್ಳಾರಿ**

ಜಿಲ್ಲೆಯಲ್ಲಿ ಕೋಳಿಶೀತ ಜ್ವರ ಕಂಡುಬಂದ ಹಿನ್ನಲೆಯಲ್ಲಿ ಅಂತರ್‌ರಾಜ್ಯದಿಂದ ಬರುವ ಕೋಳಿಗಳ ಆರೋಗ್ಯ ತಪಾಸಣೆಗಾಗಿ ಬಳ್ಳಾರಿ ಹಾಗೂ ಸಿರುಗುಪ್ಪ ತಾಲ್ಲೂಕು ಭಾಗಗಳಲ್ಲಿ 6 ವಿವಿಧ ಸ್ಥಳಗಳಲ್ಲಿ ಅಂತರರಾಜ್ಯ ತಪಾಸಣಾ ಕೇಂದ್ರ ಸ್ಥಾಪಿಸಲಾಗಿದೆ ಎಂದು ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆಯ ಉಪನಿರ್ದೇಶಕ ಡಾ.ಹನುಮಂತ ನಾಯ್ಕ ಕಾರಬಾರಿ ಅವರು ತಿಳಿಸಿದ್ದಾರೆ.

**ತಪಾಸಣಾ ಕೇಂದ್ರಗಳ ವಿವರ:**

ಬಳ್ಳಾರಿ ತಾಲ್ಲೂಕು: ಎತ್ತಿನ ಬೂದಿಹಾಳ್ ಕ್ರಾಸ್, ಸಿಂಧುವಾಳ ಕ್ರಾಸ್ ಮತ್ತು ಪರಮದೇವನಹಳ್ಳಿ(ಹಗರಿ).

ಸಿರುಗುಪ್ಪ: ಮಾಟಸೂಗೂರು, ವಟ್ಟು ಮುರುವಾಣಿ ಮತ್ತು ಇಟಗಿನಹಾಳ್.


ಹಂಪಿ ಟೈಮ್ಸ್ SSLC ಮಾರ್ಗದರ್ಶಿ
ಪ್ರಿಂಟ್ & ಇ-ಪೇಪರ್‌ನಲ್ಲೂ ಲಭ್ಯ
ಕೆಳಗಿನ ವೆಬ್‌ಸೈಟ್‌ಗೆ ಭೇಟಿ ನೀಡಿ..
www.hampitimes.com
epaper.hampitimes.com


## ಆರೋಗ್ಯ ಇಲಾಖೆ: ನೇರ ಸಂದರ್ಶನ

■ ಹಂಪಿ ಟೈಮ್ಸ್ ರಾಯಚೂರು

ಜಿಲ್ಲೆಯ ಸಿಂಧನೂರು ತಾಯಿ ಮತ್ತು ಮಕ್ಕಳ ಆಸ್ಪತ್ರೆಯಲ್ಲಿ ವಿವಿಧ ತಜ್ಞ ವೈದ್ಯಕೀಯ ಹುದ್ದೆಗಳನ್ನು ಗುತ್ತಿಗೆ ಆಧಾರದ ಮೇಲೆ ಮೆರಿಟ್ ಹಾಗೂ ರೋಸ್ಟರ್ ಆಧಾರದ ಮೇಲೆ ಭರ್ತಿ ಮಾಡಲು ಅರ್ಹ ಅಭ್ಯರ್ಥಿಗಳಿಂದ ನೇರ ಸಂದರ್ಶನವನ್ನು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳ ಕಚೇರಿಯಲ್ಲಿ ಮಾರ್ಚ 10ರಿಂದ ಮಾರ್ಚ 12ರವರೆಗೆ ಹಮ್ಮಿಕೊಳ್ಳಲಾಗಿದ್ದು, ಆಸಕ್ತಿಯುಳ್ಳ ಅಭ್ಯರ್ಥಿಗಳು ಭಾಗವಹಿಸಬಹುದಾಗಿದೆ.

ಸ್ತ್ರೀ-ರೋಗ ತಜ್ಞರು-02, ಅರವಳಿಕೆ-02, ಮಕ್ಕಳ ತಜ್ಞರು-02, ರೇಡಿಯೋಲಾಜಿಸ್ಟ್-01 ಹುದ್ದೆಗಳ ನೇಮಕಾತಿಗೆ ಸಂದರ್ಶನವನ್ನು ಹಮ್ಮಿಕೊಳ್ಳಲಾಗಿದ್ದು, ಹೆಚ್ಚಿನ ಮಾಹಿತಿಗಾಗಿ ಕಚೇರಿಯ ಅವಧಿಯಲ್ಲಿ ಸಂಪರ್ಕ ಮಾಡಬಹುದಾಗಿದೆ.


ನಿಮ್ಮ ಸಂಸ್ಥೆಯ ಬ್ರ್ಯಾಂಡಿಂಗ್, ಉತ್ಪನ್ನ, ಸೇವೆಗಳ ಪ್ರಚಾರ ಮತ್ತಷ್ಟು ಸುಲಭ!
ನಂ 1 ಜಿಲ್ಲಾಮಟ್ಟದ ದಿನಪತ್ರಿಕೆ
ಹಂಪಿ ಟೈಮ್ಸ್ ವಿಜಯನಗರದ ಹೆಮ್ಮೆ
ಪ್ರಿಂಟ್ & ಡಿಜಿಟಲ್ ದಿನಪತ್ರಿಕೆ
Print & Digital News Paper
ಸ್ಥಳೀಯ ಹಾಗೂ ವ್ಯಾಪಕ ಮಟ್ಟದಲ್ಲಿ ಜನಪ್ರಿಯ
1 ಲಕ್ಷಕ್ಕೂ ಅಧಿಕ ಇ-ಪೇಪರ್ ಓದುಗರು
94486 33038 hampitimes@gmail.com
ನಿಮ್ಮ ಕೈಗೆಟಕುವ ದರದಲ್ಲಿ ಜಾಹೀರಾತುಗಳು...
ಹಂಪಿ ಟೈಮ್ಸ್ ಇ-ಪೇಪರ್
ಓದುಗರು:- ಕರ್ನಾಟಕ, ಮಹಾರಾಷ್ಟ್ರ, ಕೇರಳ, ತೆಲಂಗಾಣ, ತಮಿಳುನಾಡು, ಆಂಧ್ರಪ್ರದೇಶ, ಉತ್ತರ ಪ್ರದೇಶ, ಗುಜರಾತ್, ಹರಿಯಾಣ, ರಾಜಸ್ಥಾನ & ಅಮೇರಿಕಾ, ಇಂಗ್ಲೆಂಡ್, ಕೆನಡಾ ಇತರೆ ರಾಷ್ಟ್ರಗಳಲ್ಲಿರುವ ಕನ್ನಡ ಓದುಗರ ಕೈಯಲ್ಲಿ ಹಂಪಿ ಟೈಮ್ಸ್ ಇ ಪೇಪರ್

ಹಂಪಿ ಟೈಮ್ಸ್ HAMPI TIMES

# ಬೆಳಕಿನ ಹಾದಿ

## ಮಾತೃದೇವೋಭವ



ಒಂದು ಗ್ರಾಮದಲ್ಲಿ ದಂಪತಿಗೆ ಮೂವರು ಮಕ್ಕಳಿದ್ದರು. ಇವರಿಗೆ ಒಬ್ಬಳು ಹೆಣ್ಣು ಮಗಳು ಇಬ್ಬರು ಗಂಡು ಮಕ್ಕಳು. ಆ ತಾಯಿಗೆ ತನ್ನ ಮಕ್ಕಳೇ ಪ್ರಪಂಚ ಎಂದು ಹೇಳುತ್ತಿದ್ದಳು. ಈ ಮೂರು ಮಕ್ಕಳನ್ನು ತುಂಬಾ ಕಷ್ಟಪಟ್ಟು ಬೆಳೆಸುತ್ತಾಳೆ. ಆದರೆ ಗಂಡ ಮದ್ಯವ್ಯಸನಿ. ದಿನ ಕುಡಿದುಕೊಂಡು ಮನೆಗೆ ಬರುತ್ತಿದ್ದ. ಆದರೆ ತಾಯಿ ನನ್ನ ಮೂರು ಮಕ್ಕಳು ಚೆನ್ನಾಗಿ ಓದಬೇಕು ಎಂಬ ಆಸೆ. ತನ್ನ ತಾಯಿ ಆಸೆ ಪಟ್ಟ ಹಾಗೆ ಆ ಮೂರು ಮಕ್ಕಳು ಚೆನ್ನಾಗಿ ಓದುತ್ತಿರುತ್ತಾರೆ. ಮದ್ಯವ್ಯಸನಿ ಪತಿ ಮಗಳಿಗೆ ಒಳ್ಳೆಯ ಸಂಬಂಧ ಬಂತು ಅಂತ ಮಗಳಿಗೆ 14 ವರ್ಷಕ್ಕೆ ಬಾಲ್ಯ ವಿವಾಹ ಮಾಡಿದ. ತಾಯಿಯು ಎಷ್ಟೇ ಬೇಡವೆಂದರೂ ಮದುವೆ ಮಾಡಿಯೇ ಬಿಟ್ಟ. ಆ ಮಗಳು ಗಂಡನ ಮನೆಗೆ ಹೋಗಿ ಕಷ್ಟಪಡುವುದನ್ನು ತಾಯಿಗೆ ನೋಡಲಾಗುವುದಿಲ್ಲ ಆದರೆ ನನ್ನ ಮಗಳಿಗೆ ನನ್ನ ಇಬ್ಬರು ಗಂಡು ಮಕ್ಕಳ ಹಾಗೆ ಓದಿಸಲಿಕ್ಕೆ ಆಗಲಿಲ್ಲ ಎಂದು ಕೊರಗುತ್ತಾಳೆ. ಆದರೆ ಇಬ್ಬರು ಗಂಡು ಮಕ್ಕಳು ಚೆನ್ನಾಗಿ ಓದಿ ಪೊಲೀಸ ಅಧಿಕಾರಿಯಾಗುತ್ತಾರೆ. ಆಗ ತಾಯಿ ಖುಷಿ ಪಟ್ಟಳು. ಆಗ ಅವಳ ಗಂಡ ಕುಡಿಯುವುದನ್ನು ಬಿಟ್ಟು ಬಿಸಿಎಂ ಹಾಸ್ಟಲ್ ಹೆಡ್ ಕುಕ್ ಆಗಿ ಕಾರ್ಯನಿರ್ವಹಿಸಿದ. ಆದರೆ ಆ ತಾಯಿ ಅವಳ ಹೆಣ್ಣುಮಗಳ ಬದುಕು ವ್ಯರ್ಥಮಾಡಿದಂತಾಯಿತು ನನ್ನ ಮಗಳ ಬಾಳು ಹಾಳಾಯ್ತಲ್ಲ ಎಂದು ಯೋಚಿಸುತ್ತಾಳೆ. ಆದರೆ ಆ ಹೆಣ್ಣು ಮಗಳು ತನ್ನ ತಾಯಿ ಅಣ್ಣಂದಿರ ಸಹಾಯದಿಂದ ಗಂಡನ ಮನೆಯಲ್ಲಿ ವಿದ್ಯಾಭ್ಯಾಸ ಮುಂದುವರಿಸುತ್ತಾಳೆ



ತಾಯಿಯ ಆಸೆಯನ್ನು ಪೂರೈಸಲೇ ಬೇಕೆಂಬ ಹಠತೊಟ್ಟು ಮದುವೆಯಾಗಿದ್ದರೂ ಓದಲೇಬೇಕೆಂಬ ಛಲದಿಂದ ಸ್ಪರ್ಧಾತ್ಮಕ ಪರೀಕ್ಷೆ ಬರೆದು PDO ಹುದ್ದೆಯನ್ನು ಅಲಂಕರಿಸುತ್ತಾಳೆ. ತನ್ನ ತಾಯಿಗೆ ಎಲ್ಲಿಲ್ಲದ ಸಂತೋಷವಾಗುತ್ತದೆ. ತನ್ನ ತಂದೆಗೆ ತಪ್ಪಿನ ಅರಿವಾಗುತ್ತದೆ. ತಾಯಿ ಇಲ್ಲದ ಈ ಪ್ರಪಂಚದಲ್ಲಿ ಏನು ಇಲ್ಲ ತಾಯಿನೇ ಎಲ್ಲಾ. ತಾಯಿ ಇಲ್ಲ ಅಂದರೆ ಬದುಕಿದ್ದು ಸತ್ತಂಗೆ, ತಾಯಿ ಋಣ ಯಾವತ್ತಿಗೂ ತೀರಿಸಲು ಸಾಧ್ಯವಿಲ್ಲ. ಮನೆಯ ಮೊದಲ ಪಾಠಶಾಲೆ. ತಾಯಿಯೇ ಮೊದಲ ಗುರು, ಭೂಮಿನು ಒಂದು ತಾಯಿ. ತಾಯಿ ಇಲ್ಲಾಂದ್ರೆ ಯಾರು ಇಲ್ಲ. ಮಾತೃದೇವೋಭವ ಎಂಬ ಮಾತು ಕಟು ಸತ್ಯವಾಗಿದೆ.

**– ಸೋನಿಯಾ 9ನೇ ತರಗತಿ**
ಸರ್ಕಾರಿ ಪ್ರೌಢಶಾಲೆ ಬ್ಯಾಸಿಗಿದೇರಿ.

**ನಿಮ್ಮೂರ ಜಾತ್ರಾ ಮಹೋತ್ಸವಕ್ಕೆ ಸ್ವಾಗತ/ ಶುಭಾಶಯ ಕೋರುವ ಮೂಲಕ ನಿಮ್ಮೂರಿನ ಉತ್ಸವ ವೈಶಿಷ್ಟ್ಯವನ್ನು ಯುವಜನತೆಗೆ ತಿಳಿಸಲು ಬಯಸುತ್ತೀರಾ?**

**ಸಂಪರ್ಕಿಸಿ ಮೊ: 9448633038**

## ನೀವೂ ಬರೆಯಬಹುದು

ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ.

### ಬೆಳಕಿನ ಹಾದಿ

ರಾಮಾಯಣ, ಮಹಾಭಾರತ, ಸಾಧು ಸಂತರು, ವಿಜ್ಞಾನಿ, ಹೀಗೆ ಪುಣ್ಯ ಪುರುಷರ ಜೀವನದಲ್ಲಿ ನಡೆದ ಘಟನೆಗಳು ಅಥವಾ ನೈತಿಕ ಕಥೆಗಳನ್ನು ಬರೆದು, ಕೊನೆಗೆ ಅಂತಹ ಕಥೆಯಿಂದ ನಮಗೆ ತಿಳಿಯುವ ಮೌಲ್ಯದ ಬಗ್ಗೆ 250 ಪದಗಳ ಮಿತಿಯಲ್ಲಿ ಬೆಳಕಿನ ಹಾದಿ ವಿಭಾಗಕ್ಕೆ ಬರೆದು ಕಳುಹಿಸಿ. ಸೂಕ್ತವಿದ್ದಲ್ಲಿ ಪ್ರಕಟಿಸುತ್ತೇವೆ. ಹೊಸ ಬರಹಗಾರರಿಗೆ ಅವಕಾಶ ಸಿದ್ಧವಾಗಿದೆ.

**–: ಸಂಪಾದಕರು :–**

**ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.**
ಇ–ಮೇಲ್:hampitimes@gmail.com
M: 94486 33038

## ಓದುಗರ ಗಮನಕ್ಕೆ

**ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರ ರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.**

**– ಜಾಹೀರಾತು ವ್ಯವಸ್ಥಾಪಕರು.**

# ಮರುಕಳಿಸದಿರಲಿ ತಪ್ಪು (ಕಥೆ)

ಎಂದಿನಂತೆ ಚೇತನ ಮುಂಜಾನೆ ಎದ್ದಾಗ ಆಕೆಯ ತಲೆ ದಿಮ್ಮೆನ್ನುತ್ತಿತ್ತು. ಪಕ್ಕದಲ್ಲಿ ತಿರುಗಿ ನೋಡಿದ ಆಕೆ ಪತಿ ಅಲ್ಲಿಲ್ಲದೆ ಇರುವುದನ್ನು ಕಂಡು ನಿಟ್ಟುಸಿರು ಬಿಟ್ಟು ಇನ್ನೆಲ್ಲಿಗೆ ಹೋಗಿರುತ್ತಾರೆ ತಮ್ಮ ಕಂಪ್ಯೂಟರ್ ಟೇಬಲ್ ಬಿಟ್ಟು ಎಂದು ಮನದಲ್ಲಿಯೇ ಗುನುಗಿಕೊಳ್ಳುತ್ತಾ ಯಾಂತ್ರಿಕ ವಾಗಿ ಮನದಲ್ಲಿಯೇ ದೇವರಿಗೆ ಕೈಮುಗಿದು ಬಿಚ್ಚಿದ ತಲೆಗೂದಲನ್ನು ಕೈಯಿಂದ ಒದರಿ ನೀಟಾ ಗಿಸಿಕೊಂಡು ಸುರುಳಿ ಸುತ್ತಿ ಮೇಲೆ ಕಟ್ಟಿ ಕ್ಲಿಪ್ಪಿನಿಂದ ಬಂಧಿಸಿದಳು.

ಕೋಣೆಯಿಂದ ಹೊರಬಂದ ಆಕೆ ಮತ್ತೊಂದು ಕೋಣೆಯಲ್ಲಿ ತನ್ನ ಆಫೀಸ್ ಕೆಲಸ ಮಾಡುವ ಟೇಬಲ್ ಗೆ ತಲೆಯನ್ನು ಒರಗಿಸಿ ಕುರ್ಚಿಯಲ್ಲಿಯೇ ಮಲಗಿದ್ದ ಗಂಡನನ್ನು ಕಂಡು ಹತಾಶೆಯ ನಗೆ ಚೆಲ್ಲಿ 'ತಾನೂ ಸುಖವಾಗಿರುವುದಿಲ್ಲ, ನಮ್ಮನ್ನೂ ಸುಖವಾಗಿರಲು ಬಿಡುವುದಿಲ್ಲ' ಎಂದು ಮನದಲ್ಲಿಯೇ ಗೊಣಗಿಕೊಳ್ಳುತ್ತಾ ಮಕ್ಕಳ ಕೋಣೆಗೆ ಹೋಗಿ ಅವರಿಬ್ಬರನ್ನೂ ಎಬ್ಬಿಸಿ ಕೊರಳಿಗೆ ಜೋತು ಬಿದ್ದ ಮಗನನ್ನು ರಮಿಸಿ ಬಚ್ಚಲಿಗೆ ಕಳುಹಿಸಿ ಮಗಳಿಗೆ ಏಳುವಂತೆ ಮತ್ತೊಮ್ಮೆ ತಾಕೀತು ಮಾಡಿ ತನ್ನ ಕೋಣೆಗೆ ತೆರಳಿ ನಿತ್ಯ ವಿಧಿಗಳನ್ನು ಪೂರೈಸಿ ಅಡುಗೆ ಮನೆಗೆ ಬಂದಳು.

ಸುಮಾರು ಒಂದೂವರೆ ಗಂಟೆಗಳ ಕಾಲ ಬೆಳಗಿನ ಕಾಫಿ, ಮಕ್ಕಳಿಗೆ ಹಾಲು,ಮಕ್ಕಳಿಬ್ಬರಿಗೂ ಡಬ್ಬಿಗೆ ಕಟ್ಟಲು ತಿಂಡಿ, ಊಟದ ತಯಾರಿ ಮಾಡತೊಡಗಿದಳು. ಮಧ್ಯದಲ್ಲಿ ಮಕ್ಕಳಿಗೆ ಬೇಕಾಗುವ ಎಲ್ಲವನ್ನು ಆಗಾಗ ಅವರ ಕೋಣೆಗೆ ಹೋಗಿ ಒದಗಿಸಿ ಅವರನ್ನು ಬೇಗ ತಯಾರಾಗಿ ಎಂದು ಗದರುತ್ತ ಮುಂಜಾನೆಯ ಗಡಿಬಿಡಿಯ ಚಟುವಟಿಕೆಯಲ್ಲಿ ತನ್ನನ್ನು ತಾನು ತೊಡಗಿಸಿಕೊಂಡಳು.

ಮಕ್ಕಳು ತಿಂಡಿ ತಿಂದು ಹಾಲು ಕುಡಿದು ಯುನಿಫಾರ್ಮ್ ಧರಿಸಿ ಶಾಲೆಗೆ ಹೋದ ನಂತರ ಮನೆಯಲ್ಲಿ ನೀರವವಾದ ವಾತಾವರಣ ಏರ್ಪಟ್ಟಿತು.. ಮತ್ತೊಂದು ಕಪ್ ಚಹ ಹಿಡಿದು ಮನೆಯ ಬಾಲ್ಕನಿಯಲ್ಲಿ ಬಂದು ಕುಳಿತ ಆಕೆಯ ತಲೆಯಲ್ಲಿ ನಿನ್ನೆ ರಾತ್ರಿ ನಡೆದ ಘಟನೆಗಳು ಮತ್ತೆ ಮರುಕಳಿಸಿದವು.

ತನ್ನ ಸೋದರತ್ತೆಯ ಮಗನನ್ನೇ ಪ್ರೀತಿಸಿ ವಿವಾಹವಾಗಿದ್ದಳು ಚೇತನ. ಆಕೆಯ ಪತಿ ಸಂತೋಷ ಮತ್ತು ಚೇತನ ನಡುವೆ ಮದುವೆಗೆ ಮುನ್ನ ಮತ್ತು ಮದುವೆಯಾದ ಹೊಸತರಲ್ಲಿ ಪರಸ್ಪರರಲ್ಲಿ ಇದ್ದ ಪ್ರೀತಿ, ಬಾಂಧವ್ಯ ದಿನಗಳೆದಂತೆ ಕುಂದತೊಡಗಿತ್ತು.



ವೀಣಾ ಹೇಮಂತಗೌಡ ಪಾಟೀಲ್
ಲೇಖಕರು, ಮುಂಡರಗಿ, ಗದಗ

Scan For Digital Colourful
HAMPI TIMES E-paper

ಮದುವೆಗೆ ಮುನ್ನ ಸಿಂಗಾರ ಸಿರಿಗೌರಿಯಂತೆ ತೋರುತ್ತಿದ್ದ ಪತ್ನಿ ಇತ್ತೀಚೆಗೆ ಸಂತೋಷನ ಪಾಲಿಗೆ ಮೂದೇವಿಯಂತೆ ಭಾಸವಾಗುತ್ತಿದ್ದಳು. ಆಕೆಯ ಪ್ರತಿಯೊಂದು ನಡೆ–ನುಡಿಯಲಿಯೂ ಕುಂದನ್ನು ಕಾಣುತ್ತಿದ್ದ ಸಂತೋಷನ ಅಸಹನೆಯಿಂದ ಚೇತನ ಮಾನಸಿಕವಾಗಿ ನೊಂದು ಅಚೇತನಳಾಗತೊಡಗಿದಳು.

ವಾಣಿಜ್ಯ ಪದವಿಯಲ್ಲಿ ರ್‍ಯಾಂಕ್ ಗಳಿಸಿದ್ದ, ಕುಟುಂಬದ ಎಲ್ಲರ ಯೋಗ ಕ್ಷೇಮವನ್ನು, ಅತ್ತೆ ಮಾವನ ಕಾಳಜಿಯನ್ನು, ಮನೆ ಕೆಲಸ, ಅಡುಗೆ ಎಂದು ಹತ್ತು ಹಲವು ಕಾರ್ಯಗಳನ್ನು ನಿರ್ವಹಿಸುತ್ತಿದ್ದ ಆಕೆ ಎಂದೂ ಆರ್ಥಿಕವಾಗಿ ತಾನು ಸಬಲಳಾಗಬೇಕು ಎಂದು ಯೋಚಿಸಲೇ ಇಲ್ಲ. ಮನೆಯನ್ನು ತಾನು ನೋಡಿಕೊಂಡರೆ ತನ್ನ ಪತಿ ಸಂತೋಷ ಕೆಲಸಕ್ಕೆ ಹೋಗಿ ಸಂಪಾದಿಸುತ್ತಾನೆ ಎಂಬ ಸೀಮಿತ ನಿಲುವಿಗೆ ಆಕೆ ಬದ್ಧಳಾಗಿದ್ದಳು. ಅದಕ್ಕೆ ತಕ್ಕಂತೆ ಸಂತೋಷನ ಶ್ರಮ ಮತ್ತು ಉತ್ತಮ ಕಾರ್ಯನಿರ್ವಹಣೆಯಿಂದಾಗಿ ಆತ ಉದ್ಯೋಗದಲ್ಲಿ ಬಹುಬೇಗ ಮುಂದೆ ಬಂದನಲ್ಲದೆ ಆರ್ಥಿಕವಾಗಿಯೂ ಸಾಕಷ್ಟು ಸಬಲನಾದನು. ಇದು ಆತನಲ್ಲಿ ಒಂದು ರೀತಿಯ ಅಹಂ ಅನ್ನು ಸೃಷ್ಟಿಸಿದ್ದು ತನ್ನಿಂದಲೇ ಈ ಎಲ್ಲಾ ಕೆಲಸ ಕಾರ್ಯಗಳು ಆಗಿದ್ದು ತನ್ನ ಪತ್ನಿ ಕೆಲಸಕ್ಕೆ ಬಾರದ, ಆರ್ಥಿಕ ಸಹಯೋಗ ನೀಡದ ಬೇಜವಾಬ್ದಾರಿ ವ್ಯಕ್ತಿತ್ವದವಳು ಎಂಬ ಭಾವ ಬಲವಾಗತೊಡಗಿತ್ತು ಸಂತೋಷನ ವೈಪರೀತ್ಯದ ನಿರೀಕ್ಷೆಗಳಿಗೆ ಸ್ಪಂದಿಸಲಾಗದೆ ಆತನ ಹಂಗಿಸುವಿಕೆಗೆ ಬಲಿಯಾದ ಚೇತನಳ ಮನೋಸ್ಥೈರ್ಯ ದಿನದಿಂದ ದಿನಕ್ಕೆ ಕುಸಿಯತೊಡಗಿತ್ತು ಎಂಬುದು ಆತನ ಗಮನಕ್ಕೆ ಬರಲೇ ಇಲ್ಲ.

ತವರಿನವರು ಮತ್ತು ಬಂಧು ಬಾಂಧವರ ಮುಂದೆ ಹೇಳಿಕೊಳ್ಳಲಾಗದ ನೋವು, ನಿರಾಸೆಗಳು ಆಕೆಯನ್ನು ಮತ್ತಷ್ಟು ದುಃಖದ ಕಡಲಿಗೆ ನೂಕಿದವು. ಹೀಗೆಯೇ ಹಲವಾರು ವರ್ಷಗಳನ್ನು



ಆಕೆ ಕಳೆದುಬಿಟ್ಟಿದ್ದಳು. ಮನೆಯಲ್ಲಿನ ಏಕತಾನತೆಯಿಂದ ಜಡ್ಡು ಗಟ್ಟಿ ಹೋದಂತೆ ಆಕೆಗೆ ಭಾಸವಾಗುತ್ತಿತ್ತು.

ಇದೀಗ ಹೊಸದೊಂದು ಸಮಸ್ಯೆ ಆವರಿಸಿದ್ದು ಅದೊಂದು ದಿನ ಆಕೆಯ ಮೊಬೈಲ್ ನಸುಕಿನ ಜಾವದಲ್ಲಿ ಬೇರೊಂದು ಲೊಕೇಶನ್ ನಲ್ಲಿ ಇರುವಂತೆ ತೋರಿಸಿದ ಪರಿಣಾಮವಾಗಿ ಸಂತೋಷ ಆಕೆಗೆ ಅಷ್ಟು ನಸುಕಿನಲ್ಲಿ ಎಲ್ಲಿ ಹೋಗಿದ್ದೆ ಹೇಳು ಎಂದು ಪೀಡಿಸಲಾರಂಭಿಸಿದ. ಇಲ್ಲಿಯವರೆಗೂ ಎಲ್ಲ ತೊಂದರೆಗಳನ್ನು ಸಮಾಧಾನದಿಂದ ಸಹಿಸಿದ ಚೇತನ ಇದೀಗ ಮೊದಲ ಬಾರಿಗೆ ಸಿಡಿದೆದ್ದಳು.

ರಾತ್ರಿ ಎಲ್ಲಾ ನಾನು ನಿನ್ನ ಪಕ್ಕವೇ ಮಲಗಿದ್ದರೂ ಅನುಮಾನಿಸುವ ನಿನಗೆ ಏನು ಹೇಳಲಿ ಎಂಬ ಭಾವ ಆಕೆಯಲ್ಲಿ ಕೋಪವನ್ನು ಹುಟ್ಟುಹಾಕಿದ್ದು ಗಂಡನ ಮೊಬೈಲನ್ನು ತೆರೆದು ಬೇರೆ ಬೇರೆ ಸಮಯದಲ್ಲಿ ಸಂತೋಷ ಮನೆಯಲ್ಲಿ ಇದ್ದರೂ ಕೂಡ ಆತನ ಮೊಬೈಲ್ನ ಲೊಕೇಶನ್ ಪಕ್ಕದ ಬೀದಿಯಲ್ಲಿ ಇರುವಂತೆ ತೋರಿಸುವದನ್ನು ಆತನಿಗೆ ಮನದಟ್ಟು ಮಾಡಿಸಲು ಪ್ರಯತ್ನಿಸಿದಳು.

ಕೆಲ ಕಾಲ ಸುಮ್ಮನಿದ್ದ ಸಂತೋಷ್ ಮತ್ತೆ 'ನಿಜ ಹೇಳಿಬಿಡು ಚೇತನ... ಅಷ್ಟು ನಸುಕಿನಲ್ಲಿ ಯಾರೊಂದಿಗೆ ಹೋಗಿದ್ದೆ' ಎಂದು ಕಾಡತೊಡಗಿದ. ಇಬ್ಬರ ಮಧ್ಯ ವಾಗ್ವಾದವೇ ಏರ್ಪಟ್ಟು ಸಂತೋಷ ತಾನು ಕೆಲಸ ಮಾಡುವ ಕೋಣೆಗೆ ಹೋಗಿ ಬಾಗಿಲು ಹಾಕಿಕೊಂಡರೆ ಅಳುತ್ತಾ ತನ್ನ ಕೋಣೆಯನ್ನು ಸೇರಿದ ಚೇತನ ರಾತ್ರಿಯಿಡೀ ತನ್ನ ತಲೆದಿಂಬನ್ನು ಒದ್ದೆ ಮಾಡಿದಳು. ಮಕ್ಕಳಾಗಲೇ ಜೋರಾದ ನಿದ್ದೆಯಲ್ಲಿದ್ದರು. ಇದೆಲ್ಲವನ್ನು ನೆನಪಿಸಿಕೊಂಡು ಚಹಾ ಕುಡಿದು ಮುಗಿಸುವ ವೇಳೆಗೆ ಎದ್ದು ಬಂದಿದ್ದ ಸಂತೋಷ ಆಕೆಯನ್ನು ಎಚ್ಚರಿಸುವ ರೀತಿಯಲ್ಲಿ ಗಂಟಲನ್ನು ಸರಿಪಡಿಸಿಕೊಂಡ. ಕೂಡಲೇ ಎಚ್ಚೆತ್ತು ಚೇತನ ಅಡುಗೆ ಮನೆ ಸೇರಿ ಆತ ಮುಖ ತೊಳೆದು ಬರುವಷ್ಟರಲ್ಲಿ ಕಾಫಿ ಮಾಡಿ ತಂದು ಟೇಬಲ್ನ ಮೇಲೆ ಇಟ್ಟಳು. ಮಾತನಾಡದೆ ಕಾಫಿ ಹೀರಿದ ಆತ ಆಕೆಯನ್ನು ಕರೆದು ಮತ್ತದೇ ಮಾತುಗಳನ್ನು ಶುರು ಮಾಡಿದಾಗ ಬೇಸರಗೊಂಡ ಆಕೆ ಪಕ್ಕದ ಮನೆಯ ಸಿ ಸಿ ಟಿವಿ ಕ್ಯಾಮೆರಾದಲ್ಲಿ ಚೆಕ್ ಮಾಡು ಎಂದು ಹೇಳಿದಳು. ಅಂತೆಯೇ ಪಕ್ಕದ ಮನೆಯವರನ್ನು ಕೇಳಿದಾಗ ತಮ್ಮ ಮನೆಯ ಸಿಸಿಟಿವಿ ಕ್ಯಾಮೆರಾದಲ್ಲಿ ರೆಕಾರ್ಡಿಂಗ್ ದೊರೆಯುವುದಿಲ್ಲ ಎಂದು ಅವರು ಹೇಳಿದರು.

ಇದೀಗ ತುಸು ಹೆಚ್ಚೇ ಬೇಸರಗೊಂಡಿದ್ದ ಆಕೆ ಸಂತೋಷನಿಗೆ ಪೊಲೀಸ್ ಸ್ಟೇಷನ್ ಗೆ ಹೋಗಲು ಹೇಳಿದಳು. ಕೂಡಲೇ ಬಟ್ಟೆ ಧರಿಸಿ ಪೊಲೀಸ್ ಸ್ಟೇಷನ್ ಗೆ ಧಾವಿಸಿದ ಆತ ತನ್ನ ಮನೆಯ ಸೈಕಲ್ ಕಳೆದು ಹೋಗಿದ್ದು ಸಿಸಿಟಿವಿ ಕ್ಯಾಮೆರಾದಲ್ಲಿ ಚೆಕ್ ಮಾಡಲು ಸಾಧ್ಯವೇ? ಎಂದು ವಿನಂತಿಸಿಕೊಂಡ. ಸಹಮತಿಸಿದ ಪೊಲೀಸ್ ಅಧಿಕಾರಿಗಳು ಕೂಡಲೇ ಸಿ ಸಿ ಟಿವಿ ಕ್ಯಾಮೆರಾದಲ್ಲಿ ಆತ ಹೇಳಿದ ಸಮಯದ ರೆಕಾರ್ಡಿಂಗನ್ನು ಪರಿಶೀಲಿಸಿದ ಅಧಿಕಾರಿಗಳು ಅಲ್ಲಿ ಯಾವುದೇ ರೀತಿಯ ಚಲನವಲನ ಕಾಣದೆ ಇರುವುದನ್ನು ಪತ್ತೆ ಹಚ್ಚಿದರು. ಗೊಂದಲದಿಂದ ಮನೆಗೆ ಬಂದ ಆತನನ್ನು ಚೇತನ ಏನಾಯಿತು ಎಂದು ಪ್ರಶ್ನಿಸಿದಾಗ ನಡೆದ ವಿಷಯವನ್ನು ಹೇಳಿ ಈಗಲಾದರೂ ನಿಜ ಹೇಳು ಚೇತನ ನಾನು ನಿನಗೆ ಏನು ಹೇಳುವುದಿಲ್ಲ ಎಂದು ಮತ್ತೆ ಆಕೆಯನ್ನು ಪ್ರಶ್ನಿಸಿದ ಸಂತೋಷ್.

ತುಸು ಹೆಚ್ಚೇ ಅಸಹನೆಗೆ ಒಳಗಾದ ಚೇತನ ಸಿಟ್ಟಿನಿಂದ ನಡೆ ನಾನೂ ಬರುತ್ತೇನೆ ಪೊಲೀಸ್ ಸ್ಟೇಷನ್ ಗೆ ಇಬ್ಬರೂ ಕೂಡಿ ಇರುವ ವಿಷಯವನ್ನು ಪೊಲೀಸರಿಗೆ ಹೇಳಿ ಪರೀಕ್ಷಿಸಿ ಬಿಡೋಣ ಎಂದು ಹೇಳಿದಳಲ್ಲದೆ ಮನೆ ಉಡುಪನ್ನು ಬದಲಾಯಿಸಿ ಬೇರೆ ಬಟ್ಟೆಯನ್ನು ಧರಿಸಿ ಆತನೊಂದಿಗೆ ಹೊರಟು ನಿಂತಳು. ಮನದಲ್ಲಿದ್ದ ಶಂಕೆ ನಿವಾರಣೆಯಾಗದ ಹೊರತು ನೆಮ್ಮದಿ ಇಲ್ಲ ಎಂಬ ಭಾವದಿಂದ ಪತ್ನಿಯನ್ನು ಕರೆದುಕೊಂಡು ಹೊರಟ ಸಂತೋಷ ಪೊಲೀಸ್ ಸ್ಟೇಷನ್ ಒಳಗೆ ಲಾಕಪ್ ನೋಡುತ್ತಲೇ ತುಸು ಆತಂಕ ಮತ್ತು ಭಯಗಳಿಂದ ಕೂಡಿದವನಾಗಿ ಮರಳಿ ಹೋಗಿ ಬಿಡೋಣ ಎಂದು ಪತ್ನಿಗೆ ಒತ್ತಾಯಿಸಿದ.

ಈಗಾಗಲೇ ಪೊಲೀಸ್ ಸ್ಟೇಷನ್ ಮೆಟ್ಟಿಲು ಹತ್ತಿದ್ದ ಆಕೆ ಆತ ಅದೆಷ್ಟೇ ಹೇಳಿದರೂ ಕೇಳದೆ ಒಳಗೆ ಹೋಗಿ ಅಲ್ಲಿದ್ದ ಮಹಿಳಾ ಪೊಲೀಸ್ ಸಿಬ್ಬಂದಿಗೆ ನಡೆದ ವಿಷಯವನ್ನು ವಿವರಿಸಿ ಹೇಳಿದಳು. ಸಹಾನುಭೂತಿಯಿಂದ ಆಕೆಯ ಮಾತನ್ನು ಆಲಿಸಿದ ಆ ಮಹಿಳಾ ಅಧಿಕಾರಿ ಆಕೆಯ ಗಂಡನ ನಂಬರ್ ಗೆ ಕಾಲ್ ಮಾಡಿ ಆತನನ್ನು ತುಸು ಒತ್ತಾಯ ಮತ್ತು ಬೆದರಿಕೆ ಹಾಕಿ ಕರೆದು ಕೂರಿಸಿಕೊಂಡು ಸಿಸಿಟಿವಿಯಲ್ಲಿ ಆ ದಿನದ ಫೂಟೇಜನ್ನು ವಿವರವಾಗಿ ತೋರಿಸಿದರು. ಆತನ ಅನುಮಾನಕ್ಕೆ ಆಸ್ಪದವಾಗುವಂತಹ ಯಾವುದೇ ಘಟನೆಗಳು ಕಾಣ ಬರಲಿಲ್ಲ. ಆದರೂ ಆತನ ಮುಖದಲ್ಲಿದ್ದ ಗೊಂದಲವನ್ನು ಕಂಡು ಆತನ ಮನದ ಶಂಕೆ ಹರಿದಿಲ್ಲ ಎಂದು ಗೊತ್ತಾದಾಗ ಸಿಟ್ಟಿಗೆದ್ದ ಆಕೆ ಬುದ್ಧಿ ಇದೆಯೇನ್ರಿ ನಿಮಗೆ? ಮದುವೆಯಾಗಿ ಇಷ್ಟು ವರ್ಷ ಆಯ್ತು ಅಂತ ಹೇಳ್ತೀರಾ! ಎರಡು ಮಕ್ಕಳು, ಒಳ್ಳೆಯ ಉದ್ಯೋಗ, ಮನೆ ಎಲ್ಲಾ ಇದ್ದೂ ಹೆಂಡತಿಯ ಮೇಲೆ ಅನುಮಾನ ಮಾಡ್ತೀರಲ್ಲ. ನಿಮ್ಮ ಹೆಂಡತಿಯ ಜಾಗದಲ್ಲಿ ಬೇರೆ ಯಾರಾದರೂ ಇದ್ದರೆ ಇಷ್ಟೊತ್ತಿಗೆ ಆತ್ಮಹತ್ಯೆ ಮಾಡಿಕೊಂಡು ಬಿಡೋರು, ಇಲ್ಲವೇ ನಿಮ್ಮಿಂದ ದೂರವಾಗುವರು.

ತಂತ್ರಜ್ಞಾನ ಅದೆಷ್ಟೇ ಮುಂದುವರಿದರೂ ಕೆಲವೊಮ್ಮೆ ತಪ್ಪು ತಿಳುವಳಿಕೆಗಳಾಗುವುದು ಸಹಜ. ಎಷ್ಟೋ ಬಾರಿ ನಮ್ಮಲ್ಲಿ ಡೆಲಿವರಿ ಆಗಿದೆ ಎಂದು ಮೆಸೇಜ್ ಬಂದ ನಂತರ ಪಾರ್ಸಲ್ಗಳು ನಮ್ಮ ಕೈ ಸೇರುತ್ತದೆ. ಮನೆಯ ಯಾವ ದಿಕ್ಕಿನಲ್ಲಿ ಸಿಗ್ನಲ್ ಹೆಚ್ಚು ಸ್ಟ್ರಾಂಗ್ ಆಗಿರುತ್ತದೆಯೋ ಅತ್ತ ಕಡೆ ಲೊಕೇಶನ್ ತೋರಿಸಿರಬಹುದು. ಅಷ್ಟಕ್ಕೂ ನಿಮ್ಮ ಪತ್ನಿ ಇದ್ದಿರಬಹುದು ಎಂದು ತೋರಿಸಿರುವ ಲೋಕೇಶನ್ ನಿಮ್ಮ ಮನೆಯ ಪಕ್ಕದ ರಸ್ತೆಯದ್ದು. ಇಷ್ಟು ಬುದ್ಧಿ ಬೇಡ್ವಾ ನಿಮಗೆ? ಅದೆಂಥ ಸಾಫ್ಟವೇರ್ ಇಂಜಿನಿಯರ್ ನೀವು? ಎಂದು ಮುಖ ಮೂತಿ ನೋಡದೆ ಬಯ್ಯ ತೊಡಗಿದಾಗ ಸಾರಿ ತಪ್ಪಾಯ್ತು ಎಂದು ಹೇಳಲಷ್ಟೇ ಸಂತೋಷನಿಗೆ ಸಾಧ್ಯವಾಯಿತು.

ಪಕ್ಕದಲ್ಲಿರುವ ತನ್ನ ಸಿಬ್ಬಂದಿಗೆ ಆ ಮಹಿಳಾ ಅಧಿಕಾರಿ ಈ ಮನುಷ್ಯನ ಮೊಬೈಲ್ ನಂಬರ್ ನೋಟ್ ಮಾಡಿಕೋ ಮತ್ತೆ ಏನಾದರೂ ತರಲೆ ತಕರಾರು ಮಾಡಿದರೆ ನನಗೆ ಖುದ್ದಾಗಿ ಫೋನ್ ಮಾಡಿ ತಿಳಿಸಿ ಎಂದು ಚೇತನರಿಗೆ ತಾಕೀತು ಮಾಡಿದಳಲ್ಲದೇ ತನ್ನ ಮೊಬೈಲ್ ನಂಬರ್ ಅನ್ನು ಆಕೆಯ ಫೋನಿನಲ್ಲಿ ದಾಖಲು ಮಾಡಿಸಿದಳು. ತಲೆ ತಗ್ಗಿಸಿಕೊಂಡು ಮನೆಗೆ ಬಂದ ಸಂತೋಷ ಪತ್ನಿಯ ಬಿಗಿಯಾದ ಮುಖವನ್ನು ಕಂಡು ಮಾತನಾಡಲು ಹೆದರಿದನಾದರೂ ಮಾತನಾಡದೆ ವಿಧಿ ಇಲ್ಲ ಎಂಬ ಅರಿವಿನಿಂದ ಚೇತನಳ ಬಳಿ ಸಾರಿದ. ಸೋಫಾದ ಮೇಲೆ ಹಿಂದಕ್ಕೆ ಒರಗಿ ಕುಳಿತ ಚೇತನಳ ತಲೆ ಒಂದೆಡೆ ವಾಲಿದ್ದರೂ ಕಣ್ಣಂಚಿನಲ್ಲಿ ನೀರು ಸಣ್ಣಗೆ ಹನಿಯುತ್ತಿತ್ತು. ಪತ್ನಿಯ ಈ ಸ್ಥಿತಿಯನ್ನು ನೋಡಿ ದ್ರವಿಸಿ ಹೋದ ಸಂತೋಷ ಮೊಣಕಾಲೂರಿ ಆಕೆಯ ಮುಂದೆ ನೆಲದ ಮೇಲೆ ಕುಳಿತು ಆಕೆಯ ಎರಡು ಕೈಗಳನ್ನು ತನ್ನ ಕೈಯಲ್ಲಿ ತೆಗೆದುಕೊಂಡು 'ಕ್ಷಮಿಸಿ ಬಿಡು ಚೇತು, ಇನ್ನಾವತ್ತು ಈ ರೀತಿಯ ಘಟನೆಗೆ ಅವಕಾಶ ಮಾಡಿಕೊಡುವುದಿಲ್ಲ' ಎಂದು ಗದ್ಗದಿತನಾಗಿ ಹೇಳಿದ.

ಕೆಲ ಕ್ಷಣಗಳ ಮೌನದ ನಂತರ ತನ್ನಲ್ಲೇ ಏನೋ ತೀರ್ಮಾನಿಸಿಕೊಂಡ ಚೇತನ ಕಣ್ಣೀರು ಒರೆಸಿಕೊಂಡು ತುಸು ಗಂಭೀರವಾದ ದನಿಯಲ್ಲಿ 'ಇಲ್ಲಿಯವರೆಗೂ ನೀನು ಮಾಡಿದ ಎಲ್ಲಾ ಆಕೃತ್ಯಗಳನ್ನು ಸಹಿಸಲು ಕಾರಣ ನಾವಿಬ್ಬರು ಪ್ರೀತಿಸಿ ವಿವಾಹವಾಗಿದ್ದು, ಮನೆಯವರ ಮುಂದೆ ನಮ್ಮ ಪ್ರೀತಿ ನಗೆಪಾಟಲಿಗೆ ಈಡಾಗಬಾರದೆಂದು. ಆದರೆ ನನ್ನ ಪ್ರೀತಿಯನ್ನು, ಸಹನೆಯನ್ನು ನನ್ನ ಬಲಹೀನತೆ ಎಂದು ಭಾವಿಸಿ ನೀನು ನನಗೆ ಇನ್ನಿಲ್ಲದ ತೊಂದರೆ ನೀಡಿದೆ.

ಅಕಸ್ಮಾತ್ ಈ ವಿಷಯವೇನಾದರೂ ನಿನ್ನ ಮತ್ತು ನನ್ನ ತಂದೆ ತಾಯಿಗಳಿಗೆ ಗೊತ್ತಾದರೆ ಮುಂದಿನ ಪರಿಣಾಮಗಳು ಏನಾಗಬಹುದು ಎಂದು ಊಹಿಸಿದ್ದೀಯ? ಎಂದು ಪತಿಯತ್ತ ಹೊರಳಿ ಕೇಳಿದಳು. ಆಕೆಯ ತಣ್ಣನೆಯ ಆದರೆ ಅಷ್ಟೇ ಆಘಾತಕಾರಿ ಮಾತುಗಳನ್ನು ಕೇಳಿದ ಆತ ಕೊನೆಯ ವಾಕ್ಯವನ್ನು ಉಚ್ಚರಿಸಿದಾಗ ನಡುಗಿ ಹೋದ.... ಹೌದಲ್ಲವೇ ತನ್ನ ತಂದೆ ತಾಯಿ, ಅತ್ತೆ ಮಾವನ ಮುಂದೆ ಪತ್ನಿ ಈ ವಿಷಯವನ್ನು ಬಾಯಿಬಿಟ್ಟರೆ ತನ್ನನ್ನು ಅವರು ಅದೆಷ್ಟು ಕೀಳಾಗಿ ಭಾವಿಸುತ್ತಾರೆ ಎಂದು ಯೋಚಿಸಿದಾಗ ಆತನ ಹೃದಯ ಬಾಯಿಗೆ ಬಂದಂತಾಯಿತು.

'ಚಿಂತಿಸಬೇಡಿ ನಾನು ಯಾರಿಗೂ ಹೇಳುವುದಿಲ್ಲ.ಇದೇ ಕೊನೆ... ಇನ್ನೊಮ್ಮೆ ಇಂತಹ ಘಟನೆ ಪುನರಾವರ್ತಿತವಾದರೆ ನಾನು ಖಂಡಿತವಾಗಿಯೂ ಸಹಿಸುವುದಿಲ್ಲ' ಎಂದು ಗಂಭೀರವಾಗಿ ಹೇಳಿ ತನ್ನ ಕೋಣೆಗೆ ತೆರಳಿದಳು. ಮರು ಮಾತಾಡದೆ ತನ್ನ ಆಫೀಸು ಕೋಣೆಗೆ ತೆರಳಿದ ಸಂತೋಷ ತನ್ನ ಮದುವೆಯಾದಾಗಿನಿಂದ ಇಲ್ಲಿಯವರೆಗಿನ ತನ್ನ ಕಟು ವರ್ತನೆಯನ್ನು, ಪತ್ನಿ ಚೇತನಳ ಸಹನೆಯ ಸ್ವಭಾವದ ಒಂದೊಂದು ಘಟನೆಗಳನ್ನು ನೆನಪಿಸಿಕೊಂಡು ಪಶ್ಚಾತ್ತಾಪ ಪಟ್ಟ.

ಹೌದಲ್ಲವೇ? ಒಮ್ಮೆಯೂ ಕೂಡ ಆಕೆ ತನ್ನ ಮಾತಿಗೆ ಎದುರಾಡದೇ, ಮನೆ, ಮಕ್ಕಳು, ಸಂಸಾರವನ್ನು ಸರಿ ತೂಗಿಸಿಕೊಂಡು ಇಲ್ಲಿಯವರೆಗೂ ಬದುಕಿನ ಬಂಡಿಯನ್ನು ಎಳೆ ತಂದಿದ್ದಾಳೆ. ಇನ್ನು ಮುಂದಾದರೂ ಆಕೆಯ ತಾಳ್ಮೆಯನ್ನು ಪರೀಕ್ಷಿಸದೆ ಕೆಣಕದೇ ತನ್ನನ್ನು ತಾನು ಸಂಭಾಳಿಸಿಕೊಳ್ಳಬೇಕು ಎಂದು ದೃಢ ನಿರ್ಧಾರವನ್ನು ಕೈಗೊಂಡನು.

# ಸ್ತ್ರೀ ಎಂದರೆ ಅಷ್ಟೇ ಸಾಕೇ

ಆಕಾಶವಾಣಿಯಲ್ಲಿ ಅಶ್ವಥ್ ರವರ ಮಧುರ ಕಂಠದಿಂದ "ನಿನಗೆ ಬೇರೆ ಹೆಸರು ಬೇಕೇ ಸ್ತ್ರೀ ಎಂದರೆ ಅಷ್ಟೇ ಸಾಕೇ" ಎಂಬ ಭಾವಗೀತೆ ಭಾವ ತುಂಬಿ ಹೊರಹೊಮ್ಮುತ್ತಿತ್ತು. ಹೌದಲ್ಲವೇ,...ಇಳೆಯಷ್ಟು ಭಾರ ಹೊತ್ತಿರುವ ಮಹಿಳೆಗೆ ಹತ್ತಾರು ಹೆಸರುಗಳು! ಅವಳ ಹೆಸರು ಮಾನಿನಿ ಅರಿತು ನಡೆವಳು ಎಲ್ಲರ ಒಳದನಿ ಮತ್ತೊಂದು ಹೆಸರು ವನಿತೆ ನೋವ ನುಂಗಿ ನಗುವ ದೇವತೆ.

ಕಾರ್ಯೇಶು ದಾಸಿ
ಕರುಣೇಶು ಮಂತ್ರಿ
ಭೋಜೇಶು ಮಾತ
ರೂಪೇಶು ಲಕ್ಷ್ಮಿ
ಶಯನೇಶು ರಂಭಾ
ಕ್ಷಮೆಯಾ ಧರಿತ್ರಿ

ಎಂಬ ಬೆಲೆಕಟ್ಟಲಾಗದ ನುಡಿಗಳು ನೂರಕ್ಕೆ ನೂರು ಸತ್ಯವಾದ ಮಾತುಗಳು.

ಹೆಣ್ಣೊಂದು ಹುಟ್ಟಿದರೆ ಮನೆ ತಣ್ಣಗಿರುತ್ತದೆ ಎಂಬ ಮಾತಿನಂತೆ, ಹೆಣ್ಣು ಹುಟ್ಟಿದಂದಿನಿಂದಲೇ ಆ ಮನೆಯ ನಂದಾದೀಪವಾಗುತ್ತಾಳೆ. ಹೆಣ್ಣಿಗೆ ಪಾಲನೆ, ಪೋಷಣೆ, ಆರೈಕೆ, ಕರುಣೆ ಎಲ್ಲವೂ ದೈವೀದತ್ತವಾಗಿ ಸಮ್ಮಿಳಿತವಾಗಿರುವಂತೆ ಮನೆಯಲ್ಲಿರುವ ಒಂದೆರಡು ವರ್ಷದ ಪುಟ್ಟ ಮಗುವಿನ ಚಟುವಟಿಕೆಗಳನ್ನು ಗಮನಿಸಿದಾಗ ಗೋಚರಿಸುತ್ತದೆ.ಆ ಮಗು ತನ್ನ ಬಳಿ ಇರುವ ಪುಟ್ಟ ಬೊಂಬೆಯನ್ನು ತಟ್ಟಿ ಮಲಗಿಸುವುದು, ತುತ್ತಿಡಲು ಪ್ರಯತ್ನಿಸುವುದು, ಅದಕ್ಕೆ ಸ್ನಾನ ಮಾಡಿಸುವುದು ಬಟ್ಟೆ ಹಾಕುವುದು ಅದನ್ನು ಮುದ್ದಿಸುವುದು ಹೀಗೆ ಅನೇಕ ಕೆಲಸಗಳಲ್ಲಿ ನಿರತಳಾಗಿ ತನ್ನ ಪಾಡಿಗೆ ತಾನು ಆಟವಾಡುತ್ತಿರುತ್ತದೆ. ಮಗಳು ತಾಯಿಗೆ ತಾಯಿ, ಮಮತಾಮಯಿ, ಹೆಣ್ಣಿರದ ಮನೆ

ಏನಿದ್ದರೂ ಕಡಿಮೆನೇ...
ಹೆಣ್ಣೆಂದರೆ ಬೆಳದಿಂಗಳ ಮುಗಿಲು
ತುಂಬುವಳು ತಾಯಿಯ ಮಡಿಲು
ಅವಳಿರಲು ಇರಲಾರದು ದಿಗಿಲು
ಅಪ್ಪನಿಗೂ ಆಗುವಳು ಹೆಗಲು.

ಹೆಣ್ಣೊಂದು ಮಗಳಾಗಿ, ಸಹೋದರಿಯಾಗಿ, ಅತ್ತಿಗೆ ,ನಾದಿನಿಯಾಗಿ, ತಾಯಿಯಾಗಿ ಅತ್ತೆಯಾಗಿ ,ಅಜ್ಜಿಯಾಗಿ ಅನೇಕ ಪಾತ್ರಗಳನ್ನು ವಹಿಸುವ ತಾಳ್ಮೆಯ ಪ್ರತೀಕವೇ ಆಗಿರುತ್ತಾಳೆ. ಹಿಂದೆಂದಿಗಿಂತಲೂ ಇಂದು ಸ್ತ್ರೀ ತನ್ನನ್ನು ಎಲ್ಲ ರಂಗದಲ್ಲೂ ಗುರುತಿಸಿಕೊಂಡಿದ್ದಾಳೆ. ಎಲ್ಲಾ ಕ್ಷೇತ್ರಗಳಲ್ಲೂ ತನ್ನದೇ ಆದ ಛಾಪು ಮೂಡಿಸಿದ್ದಾಳೆ.

ಹುಟ್ಟಿದ ಹೆಣ್ಣೊಂದು
ಬಟ್ಟ ಬಯಲಲಿ ಬೆಳೆದು
ಬೆಟ್ಟದಷ್ಟು ಕಷ್ಟವ ತಡೆದು
ಮೆಟ್ಟಿದ ಮನೆಯ ಪೊರೆದು
ಬದುಕ ಹಸನಾಗಿಸುವುದು.

ಹೆಣ್ಣಿಗೆ ಸಿಗುವ ಸ್ಥಾನಮಾನ ಗೌರವ ಪ್ರೀತ್ಯಾಧಾರಗಳು ಮಹಿಳಾ ದಿನದ ಆಚರಣೆಗಳಿಗೆ ಸೀಮಿತವಾಗದೆ ನಿರಂತರವಾಗಿರಲಿ.

ಹೆಣ್ಣೆಂದರೆ ಚೇತನ
ಈ ಜಗಕೆಲ್ಲ ಪ್ರೇರಣ
ನೀನೊಂದು ಪ್ರಶಾಂತ ನಂದಾದೀಪ
ಈ ಜಗವ ಪೊರೆವ ದೇವತಾ ಸ್ವರೂಪ
ನೀನೆಂದಿಗೂ ಅಲ್ಲ ಅಬಲೆ
ಸದಾ ಸಬಲೆ ಪ್ರಬಲೆ
ಅಸಹಾಯಕಳಲ್ಲ ಈ ತರುಣಿ
ಅಸಮಾನ್ಯ ಕರ್ಮಣಿ
ಕೊಡವಿ ನಿತ್ಯದ ಗೊಡವೆ
ಸದಾ ಕಾರ್ಯೋನ್ಮುಖಳಾಗಿ ದುಡಿವೆ
ನಿನ್ನಲ್ಲಡಗಿಹುದು ಅದ್ಭುತ ಶಕ್ತಿ
ಕಣ ಕಣವೂ ನಿನ್ನದೇ ಸ್ಫೂರ್ತಿ
ನೀ ಕಲಿತರೆ ನಾಲ್ಕಕ್ಷರ
ನಿನ್ನವರಾಗುವರು ಸಾಕ್ಷರ
ಸೃಷ್ಟಿ ದೃಷ್ಟಿ ಸಮಷ್ಟಿ ನೀ ಮಹಿಳೆ
ಅದಕ್ಕೆಂದೇ ನಿನ್ನ ಹೆಸರು ಪ್ರಕೃತಿ ಇಳೆ
ತರುಣಿ ನೀನಾಗಿರುವೆ ಎಲ್ಲರ ಕಣ್ಮಣಿ
ಈ ಜಗವೇ ಎಂದೆಂದೂ ನಿನಗೆ ಚಿರಋಣಿ.

**– ಶೋಭಾ ಮಲ್ಲಿಕಾರ್ಜುನ್**
**ಶಿಕ್ಷಕರು ಮತ್ತು ಕವಯಿತ್ರಿ, ಚಿತ್ರದುರ್ಗ.**



Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No.15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA, PRGI No:KARKAN/2023/88055

## ಕವಿ ಮನಸು

### ಸುರಕ್ಷತೆ

ಇರಲಿ ಎಲ್ಲೆಡೆ ಸುರಕ್ಷತೆ
ಬೇಕು ಸಾಮಾಜಿಕ ಭದ್ರತೆ
ಶಾಂತಿ ಸಾಮರಸ್ಯಕೆ ಆದ್ಯತೆ
ಜೀವರಕ್ಷಣೆಗೆ ಕೊಡುವ ಪ್ರಾಮುಖ್ಯತೆ

ಮಾಡುವ ಭಯೋತ್ಪಾದನೆಯ ನಿರ್ಮೂಲನೆ
ಆಗಲಿ ಸುರಕ್ಷತಾ ನಿಯಮಗಳ ಪಾಲನೆ
ಸ್ವಚ್ಛತೆಗೆ ಇರಲಿ ಎಂದೂ ಚಾಲನೆ
ಸಾಂಕ್ರಾಮಿಕ ರೋಗಗಳಿಂದ ಸಿಗಲಿ ವಿಮೋಚನೆ

ಹೆಣ್ಣು ಮಕ್ಕಳ ಸುರಕ್ಷತೆಗೆ ಆಗುವ ಕಟೀಬದ್ಧ
ಅಸುರೀ ಶಕ್ತಿಗಳ ಮೇಲೆ ನಡೆಯುತ್ತಿರಲಿ
ಯುದ್ಧ
ಜೀವ ರಕ್ಷಣೆಗೆ ಆಗುವ ಸದಾ ಸನ್ನದ್ಧ
ಸುರಕ್ಷತೆಯೇ ಮೊದಲು ಎಂಬ ವಾಕ್ಯಕೆ ಬದ್ಧ

– ಚೇತನ ಭಾರ್ಗವ, ಬೆಂಗಳೂರು

### ದೇಶಭಕ್ತಿ ಗೀತೆ

ಭಾರತಮಾತೆಯ ಮಕ್ಕಳು ನಾವು
ಮಾತೃಭೂಮಿಗೆ ನಮಿಸುವೆವು
ರಾಷ್ಟ್ರ ಭಕ್ತಿಯ ಭಾವನೆ ಬೆಳೆಸುತ
ಭಾರತ ನೆಲದಲ್ಲಿ ಬೆಳೆಯುವೆವು (ವಂದೇ ಮಾತರಂ)

ಗಾಂಧಿ ಮಹಾತ್ಮರ ಸತ್ಯ ಅಹಿಂಸೆ
ಪಾಠವೇ ನಮಗೆ ನೀತಿಯು
ಸರ್ವಧರ್ಮದಲ್ಲೂ ಪ್ರೀತಿ ಹಂಚುತ
ಸಾಗುವುದೇ ನಮ್ಮ ರೀತಿಯು (ವಂದೇ ಮಾತರಂ)

ತ್ರಿವರ್ಣ ಧ್ವಜದ ಹಾರಾಟದಲ್ಲಿ
ಹರಡಿದೆ ನಾಡಿನ ಕೀರ್ತಿಯು
ಜನಗಣಮನದ ರಾಷ್ಟ್ರಗೀತೆಯಲ್ಲಿ
ಅಡಗಿದೆ ನಮ್ಮಯ ಸ್ಫೂರ್ತಿಯು (ವಂದೇ ಮಾತರಂ)

ದ್ವೇಷವ ಮರೆತು ಏಕತೆ ಅರಿತು
ದೇಶದ ಶಾಂತಿಯ ಉಳಿಸೋಣ
ಯೋಧರಾಗಿ ಎಲ್ಲರೂ ಬೆರೆತು
ದೇಶದ ಸೇವೆಯನ್ನು ಮಾಡೋಣ (ವಂದೇ ಮಾತರಂ)

– ಕಲ್ಪನಾ M B, 9ನೇ ತರಗತಿ
ಸರ್ಕಾರಿ ಪ್ರೌಢಶಾಲೆ ಬ್ಯಾಸಿಗಿದೇರಿ

ಯುಕೆ ಮನಃಶಾಸ್ತ್ರ ವಿಭಾಗದ ಪ್ರಾಧ್ಯಾಪಕರಾದ ಪ್ರೊ. ರೋನಿತ್ ಕಾರ್ಕ ಹೇಳಿಕೆ

# ಲಿಂಗ ಸಮಾನತೆ ನಮ್ಮ ಹೊಣೆ




■ **ಹಂಪಿ ಟೈಮ್ಸ್ ಹೊಸಪೇಟೆ**

ಲಿಂಗ ಸಮಾನ ಜಗತ್ತನ್ನು ನಿರ್ಮಿಸುವ ಮಹಿಳೆಯರ ಜೊತೆಗೆ ಹೆಜ್ಜೆ ಹಾಕಲು ಪುರುಷರ ಬೆಂಬಲ ಅಗತ್ಯವಿದೆ ಎಂದು ಬಾರ್ಲಿಯಾನ್ ವಿಶ್ವವಿದ್ಯಾಲಯ, ಇಸ್ರೇಲ್ ಸ್ಕೂಲ್ ಆಫ್ ಬ್ಯುಸಿನೆಸ್, ಎಕ್ಸೆಟರ್ ವಿಶ್ವವಿದ್ಯಾಲಯ, ಯುಕೆ ಮನಃಶಾಸ್ತ್ರ ವಿಭಾಗದ ಪ್ರಾಧ್ಯಾಪಕರಾದ ಪ್ರೊ. ರೋನಿತ್ ಕಾರ್ಕ ಅವರು ತಿಳಿಸಿದರು.

ಕನ್ನಡ ವಿಶ್ವವಿದ್ಯಾಲಯದ ಪಂಪ ಸಭಾಂಗಣದಲ್ಲಿ ಮಹಿಳಾ ಅಧ್ಯಯನ ವಿಭಾಗವು ಬುಧವಾರ ಅಂತರಾಷ್ಟ್ರೀಯ ಮಹಿಳಾ ದಿನಾಚರಣೆಯ ಅಂಗವಾಗಿ ಹಮ್ಮಿಕೊಂಡಿದ್ದ ಕೂಡಿ ಕಲಿಯುವುದು : ಸಂಘಟನೆ/ಸಂಸ್ಥೆಗಳಲ್ಲಿ ಲಿಂಗ ಸಮಾನತೆಯನ್ನು ಉತ್ತೇಜಿಸುವುದರಲ್ಲಿ ಪುರುಷರ ಸಹಭಾಗಿತ್ವ ಎನ್ನುವ ವಿಶೇಷ ಉಪನ್ಯಾಸವನ್ನು ನೀಡುತ್ತಾ ಮಾತನಾಡಿದ, ಅವರು ನಾವೆಲ್ಲರೂ ಸಮಸ್ಯೆಯ ಭಾಗವಾಗಿದ್ದೇವೆ ಅದನ್ನು ಪರಿಹರಿಸಿಕೊಳ್ಳಲು ಪ್ರಯತ್ನಿಸಬೇಕು. ಪ್ರಮುಖವಾಗಿ ಸ್ತ್ರೀಲಿಂಗ ವಿಷಯಗಳಿಗೆ ಸಂಬಂಧಿಸಿದ ಕ್ರಿಯಾಶೀಲತೆಯ ನಿರ್ದಿಷ್ಟ ಕ್ಷೇತ್ರಗಳಿವೆ, ಈ ಕ್ಷೇತ್ರಗಳಲ್ಲಿ ಅವರ ಸೀಮಿತ ಜ್ಞಾನ ಮತ್ತು ಅನುಭವದಿಂದಾಗಿ ಪುರುಷರು ತೊಡಗಿಸಿಕೊಳ್ಳಲು ಸಾಧ್ಯವಾಗುವುದಿಲ್ಲ. ಇನ್ನೂ ಒಂದು ಹೆಣ್ಣಿಗೆ ಮನೆಯಲ್ಲಿ ಕೆಲಸ ಕಾರ್ಯಗಳಿಗೆ ಪ್ರೋತ್ಸಾಹ ಸಿಕ್ಕರು ಹೊರಗಡೆ ಪ್ರೋತ್ಸಾಹ ಸಿಗುವುದು ಕಡಿಮೆ. ಅನಾದಿಕಾಲದಿಂದಲೂ ಹೆಣ್ಣಿಗೆ ಗಂಡಿನ ಜೊತೆ ಬದುಕುವುದು ಅನಿವಾರ್ಯವಾಗಿದೆ. ಅವಳನ್ನು ಪ್ರೋತ್ಸಾಹ ಮಾಡುವ ನೆಪದಲ್ಲಿ "ನೀನು ಏನೇ ಮಾಡು ನಾವು ಹಿಂದೆ ಇರುತ್ತೇವೆ" ಎಂದು ಹೇಳುವ ಮೂಲಕ ಅವಳ ಸ್ವತಂತ್ರ ಆಲೋಚನೆಯನ್ನು ಕಸಿದುಕೊಳ್ಳುವ ಯತ್ನಗಳು ನಡೆಯುತ್ತಿವೆ. ಅವರು ಎಲ್ಲೇ ಇದ್ದರೂ ಅವಳಿಗೆ ಅಣ್ಣ, ತಂದೆ, ಗಂಡ, ಸ್ನೇಹಿತ, ಯಾರೇ ಆಗಿದ್ದರೂ ಅವಳಿಗೆ ಭದ್ರತೆಯ ಅಂದರೆ ಗೇಟ್ ಕೀಪರ್ ರೀತಿಯಲ್ಲಿಇರುತ್ತಾರೆಸ್ವತಂತ್ರವಾಗಿರಲುಸಾಧ್ಯವಾಗುವುದಿಲ್ಲ ಎಂದು ನುಡಿದರು.

ಪ್ರಸ್ತುತ ದಿನಗಳಲ್ಲಿ ಮಹಿಳೆಯ ಜೀವನ ಹಾವು ಏಣಿಯ ಆಟದ ರೀತಿಯಲ್ಲಿ ಆಗಿದ್ದು ಮನೆಯಲ್ಲಿ ಹೆಣ್ಣು ಗಂಡು ಭೇದಭಾವವಿಲ್ಲದೆ ಮಕ್ಕಳನ್ನು ಬೆಳೆಸುವುದರ ಮೂಲಕ ಸಮಾನತೆಗೆ ಬುನಾದಿ ಹಾಕಬೇಕು ಎಂದು ತಿಳಿಸಿದರು.

ಕನ್ನಡ ವಿಶ್ವವಿದ್ಯಾಲಯದ ಮಾನ್ಯ ಕುಲಸಚಿವರಾದ ಪ್ರೊ. ವಿಜಯ್ ಪೂಣಚ್ಚ ತಂಬಂಡ ಅವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡುತ್ತಾ, ಒಂದು ಹೊಸ ಬಗೆಯ ಆಯಾಮಗಳಲ್ಲಿ ಚರ್ಚೆಯಾಗಬೇಕಾಗಿದ್ದು, ನಾವು ನಮ್ಮಲ್ಲಿ ಭಾವನಾತ್ಮಕವಾಗಿ ತುಂಬಾ ರೋಚಕವಾಗಿ ಮಹಿಳೆಯರನ್ನು ನೋಡದೆ ಸಮಾನ ದೃಷ್ಟಿಯಲ್ಲಿ ಕಾಣಬೇಕು ಆದರೆ ಮಾತ್ರ ಲಿಂಗ ಸಮಾನತೆ ಸಾಧ್ಯವಾಗುತ್ತದೆ ಎಂದು ತಿಳಿಸಿದರು.

ಮಹಿಳಾ ಅಧ್ಯಯನ ವಿಭಾಗದ ಮುಖ್ಯಸ್ಥರಾದ ಪ್ರೊ. ಶೈಲಜ ಇಂ. ಹಿರೇಮಠ ಅವರು ಪ್ರಾಸ್ತಾವಿಕವಾಗಿ ಮಾತನಾಡಿದರು. ಈ ಕಾರ್ಯಕ್ರಮದಲ್ಲಿ ವಿವಿಧ ನಿಕಾಯಗಳ ಡೀನರು, ವಿವಿಧ ವಿಭಾಗಗಳ ಪ್ರಾಧ್ಯಾಪಕರು, ಬೋಧಕ ಬೋಧಕೇತರ ಸಿಬ್ಬಂದಿಗಳು, ಸಂಶೋಧನಾರ್ಥಿಗಳು ಉಪಸ್ಥಿತರಿದ್ದರು.

# ಎಸ್.ಸಿ ಎಸ್.ಟಿ ಅಲೆಮಾರಿ ಸಮುದಾಯದ ಅಂತಿಮ ಆಯ್ಕೆಪಟ್ಟಿ ಪ್ರಕಟ

■ **ಹಂಪಿ ಟೈಮ್ಸ್ ಕೊಪ್ಪಳ**

ಸಮಾಜ ಕಲ್ಯಾಣ ಇಲಾಖೆಯಿಂದ 2022–23 ಮತ್ತು 2023–24ನೇ ಸಾಲಿನ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಅಲೆಮಾರಿ ಸಮುದಾಯದ ಅಂತಿಮ ಆಯ್ಕೆಪಟ್ಟಿಯನ್ನು ಪ್ರಕಟಿಸಲಾಗಿದೆ.

ಕೊಪ್ಪಳ ಜಿಲ್ಲಾಧಿಕಾರಿಗಳು ಹಾಗೂ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಅಲೆಮಾರಿ ಅಭಿವೃದ್ಧಿ ನಿಗಮದ ಅಧ್ಯಕ್ಷರ ಅಧ್ಯಕ್ಷತೆಯಲ್ಲಿ 2024ರ ಸೆಪ್ಟೆಂಬರ್ 12 ರಂದು ಜರುಗಿದ ಆಯ್ಕೆ ಸಮಿತಿ ಸಭೆಯಲ್ಲಿ 2022–23 ಮತ್ತು 2023–24ನೇ ಸಾಲಿನ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಅಲೆಮಾರಿ ಸಮುದಾಯದ ಎಲ್ಲಾ ಯೋಜನೆಗಳಿಗೆ ನಿಗದಿಪಡಿಸಿದ ಭೌತಿಕ ಗುರಿಗಳಿಗನುಸಾರವಾಗಿ ಅಂತಿಮ ಆಯ್ಕೆಪಟ್ಟಿಯನ್ನು ಸಿದ್ಧಪಡಿಸಿ ಸಂಬಂಧಿಸಿದ ಸಹಾಯಕ ನಿರ್ದೇಶಕರು ಸಮಾಜ ಕಲ್ಯಾಣ ಇಲಾಖೆ ಕೊಪ್ಪಳ, ಗಂಗಾವತಿ, ಯಲಬುರ್ಗಾ, ಕುಷ್ಟಗಿ ತಾಲೂಕಾ ಕಛೇರಿ ಮತ್ತು ಉಪನಿರ್ದೇಶಕರು ಜಿಲ್ಲಾ ಸಮಾಜ ಕಲ್ಯಾಣ ಇಲಾಖೆ ಕೊಪ್ಪಳದ ಕಛೇರಿಯ ನೋಟೀಸ್ ಬೋರ್ಡ್‌ಗೆ ಅಂಟಿಸಲಾಗಿರುತ್ತದೆ. ಆಯ್ಕೆಯಾದ ಫಲಾನುಭವಿಗಳು ಸಂಬಂಧಿಸಿದ ತಾಲೂಕು ಕಛೇರಿಗಳಿಗೆ ಭೇಟಿ ನೀಡಿ ಸೂಕ್ತ ದಾಖಲಾತಿಗಳನ್ನು ತಮಗೆ ಸಂಬಂಧಿಸಿದ ತಾಲೂಕು ಕಛೇರಿಗಳಿಗೆ ಸಲ್ಲಿಸಬೇಕು ಎಂದು ಕೊಪ್ಪಳ ಸಮಾಜ ಕಲ್ಯಾಣ ಇಲಾಖೆ ಉಪನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.


**ಹಂಪಿ ಟೈಮ್ಸ್ SSLC ಮಾರ್ಗದರ್ಶಿ**
**ಇ-ಪೇಪರ್‌ನಲ್ಲೂ ಲಭ್ಯ**
**ಕೆಳಗಿನ ವಿಳಾಸಕ್ಕೆ ಭೇಟಿ ನೀಡಿ..**
www.hampitimes.com
epaper.hampitimes.com

## ನಿತ್ಯ ಪಂಚಾಂಗ

ಮಾಸ: ಫಾಲ್ಗುಣ । ಸಂವತ್ಸರ: ಕ್ರೋಧಿ

**06–03–2025 – ಗುರುವಾರ**

| | |
|---|---|
| ತಿಥಿ | : ಸಪ್ತಮಿ |
| ಪಕ್ಷ | : ಶುಕ್ಲ |
| ನಕ್ಷತ್ರ | : ರೋಹಿಣಿ |
| ಯೋಗ | : ವಿಷ್ಕುಂಭ |
| ಕರಣ | : ವಾಣಿಜ |
| ಸೂರ್ಯೋದಯ | : 06:45:20 |
| ಸೂರ್ಯಾಸ್ತ | : 18:31:11 |
| ರಾಹು ಕಾಲ | : 14:06–15:35 |
| ಯಮಘಂಡ ಕಾಲ | : 06:45–08:14 |
| ಗುಳಿಕ ಕಾಲ | : 09:42–11:10 |



## ತುಂಗಭದ್ರಾ ನೀರಿನ ಮಟ್ಟ

ಬುಧವಾರ : 05–03–2025

| | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1605.79 ಅಡಿ |
| ಒಳ ಹರಿವು | 0 ಕ್ಯುಸೆಕ್ |
| ಹೊರ ಹರಿವು | 6432 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 29.992 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |

ಕಳೆದ ವರ್ಷ ಇದೇ ದಿನ

| | |
|---|---|
| ಇಂದಿನ ಮಟ್ಟ | 1586.18 ಅಡಿ |
| ಒಳ ಹರಿವು | 0 ಕ್ಯುಸೆಕ್ |
| ಹೊರ ಹರಿವು | 885 ಕ್ಯುಸೆಕ್ |
| ಸಾಮರ್ಥ್ಯ | 8.123 ಟಿಎಂಸಿ |

ರಾಯಚೂರು ಜಿಲ್ಲಾಧಿಕಾರಿ ನಿತೀಶ್ ಕೆ ಸೂಚನೆ | ಬೇಸಿಗೆಯಲ್ಲಿ ನೀರಿನ ಸಮಸ್ಯೆಯಾಗಬಾರದು

# ಕೆರೆಗಳನ್ನು ತುಂಬಿಸಲು ಅಧಿಕಾರಿಗಳು ಯುದ್ಧೋಪಾದಿಯಲ್ಲಿ ಕಾರ್ಯನಿರ್ವಹಿಸಿ

## ಕುಡಿಯುವ ನೀರಿನ ಪೂರೈಕೆ ಮಾಡುವಾಗ ವಿದ್ಯುತ್ ಕಡಿತ ಆಗದಂತೆ ಜೆಸ್ಕಾಂ ಜೊತೆಗೆ ಸರಿಯಾಗಿ ಸಮನ್ವಯತೆ ಕಾಯ್ದುಕೊಳ್ಳಿ




■ **ಹಂಪಿ ಟೈಮ್ಸ್ ರಾಯಚೂರ**

ಈ ಹಿಂದೆ ಸಭೆ ನಡೆಸಿ ನಿರ್ದೇಶನ ನೀಡಿದಂತೆ ರಾಯಚೂರ ಜಿಲ್ಲೆಯಲ್ಲಿನ ಕೆರೆಗಳನ್ನು ತುಂಬಿಸುವ ಕಾರ್ಯವನ್ನು ಯುದ್ಧೋಪಾದಿಯಲ್ಲಿ ಮುಂದುವರೆ ಸಬೇಕು. ವಾರದೊಳಗೆ ಕೆರೆಗಳನ್ನು ತುಂಬಿಸಲು ಪ್ರಕ್ರಿಯೆಯನ್ನು ಪೂರ್ಣಗೊಳಿಸಬೇಕು ಎಂದು ಜಿಲ್ಲಾ ವಿಪತ್ತು ನಿರ್ವಹಣಾ ಪ್ರಾಧಿಕಾರದ ಅಧ್ಯಕ್ಷರು ಆಗಿರುವ ಜಿಲ್ಲಾಧಿಕಾರಿಗಳಾದ ನಿತೀಶ್ ಕೆ ಅವರು ಹೇಳಿದರು.

ನೂತನ ಜಿಲ್ಲಾಡಳಿತ ಭವನದಲ್ಲಿ ಬುಧವಾರ ವಿವಿಧ ತಾಲೂಕುಗಳ ತಹಸೀಲ್ದಾರರು, ತಾಲೂಕು ಪಂಚಾಯತ್ ಕಾರ್ಯ ನಿರ್ವಹಣಾ ಧಿಕಾರಿಗಳು ಮತ್ತು ನೊಡಲ್ ಅಧಿಕಾರಿಗಳು ಹಾಗೂ ಇನ್ನಿತರ ಇಲಾಖೆಗಳ ಅಧಿಕಾರಿಗ ಳೊಂದಿಗೆ ವಿಡಿಯೋ ಸಂವಾದ ನಡೆಸಿ ಅವರು ಮಾತನಾಡಿದರು. ಕುಡಿಯುವ ನೀರು ಪೂರೈಕೆ, ಕೆರೆ ತುಂಬಿಸುವುದು ಸೇರಿದಂತೆ ಬರ ನಿರ್ವಹಣೆಯ ಬಗ್ಗೆ ಉಪ ವಿಭಾಗಾಧಿಕಾರಿಗಳು ಮತ್ತು ಎಲ್ಲ ತಾಲೂಕುಗಳ ತಹಸೀಲ್ದಾರರು ಸೂಕ್ತ ರೀತಿಯಲ್ಲಿ ಮೇಲ್ವಿಚಾರಣೆ ಮಾಡಬೇಕು. ಆಯಾ ಕಡೆಗೆ ಸಭೆಗಳನ್ನು ನಡೆಸಿ ವರದಿ ಮಾಡಬೇಕು.

ಬೇಸಿಗೆಯ ಅವಧಿಯಲ್ಲಿ ಕುಡಿಯುವ ನೀರಿನ ಸಮಸ್ಯೆಯನ್ನು ಎದುರಿಸಬಹುದಾದ ಸಮಸ್ಯಾತ್ಮಕ ಹಳ್ಳಿಗಳ ಪಟ್ಟಿ ಮಾಡಬೇಕು. ಇರುವ ನೀರಿನ ಮೂಲಗಳ ಸಂರಕ್ಷಣೆ ಮಾಡಬೇಕು. ತುರ್ತು ಸಂದರ್ಭ ಎದುರಾದಾಗ ಬಾಡಿಗೆ ಪಡೆಯಲು ಅನುಕೂಲವಾಗುವಂತೆ ಈಗಿನಿಂದಲೇ ಖಾಸಗಿ ಬೊರವೆಲಗಳನ್ನು ಗುರುತಿಸಿ ಕೊಳ್ಳಬೇಕು ಎಂದು ಅಧಿಕಾರಿಗಳಿಗೆ ಸೂಚನೆ ನೀಡಿದರು.

ಜಿಲ್ಲಾ ಪಂಚಾಯತ್ ಸಿಇಓ ರಾಹುಲ್ ಪಾಂಡ್ವೆ ಅವರು ಮಾತನಾಡಿ, ಆಯಾ ತಾಲೂಕು ಪಂಚಾಯತ್ ಕಾರ್ಯ ನಿರ್ವಹಣಾಧಿಕಾರಿಗಳು ಮತ್ತು ಎಲ್ಲ ಗ್ರಾಮ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು ಬೇಸಿಗೆಯ ಈ ಅವಧಿಯಲ್ಲಿ ಕಾಳಜಿ ವಹಿಸಿ ಕಾರ್ಯನಿರ್ವಹಿಸಬೇಕು. ಯಾವುದೇ ಗ್ರಾಮಗಳಲ್ಲಿ ಕುಡಿಯುವ ನೀರು ಪೂರೈಕೆಯಲ್ಲಿ ತೊಂದರೆಯಾಗದಂತೆ ಮುನ್ನೆಚ್ಚರಿಕೆ ವಹಿಸಬೇಕು ಎಂದು ಕಟ್ಟುನಿಟ್ಟಿನ ನಿರ್ದೇಶನ ನೀಡಿದರು.

ಕುಡಿಯುವ ನೀರಿನ ಪೂರೈಕೆ ಮಾಡುವಾಗ ವಿದ್ಯುತ್ ಕಡಿತ ಆಗದಂತೆ ಜೆಸ್ಕಾಂ ಜೊತೆಗೆ ಸರಿಯಾಗಿ ಸಮನ್ವಯ ಮಾಡಬೇಕು ಎಂದರು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಾದ ಪುಟ್ಟಮಾದಯ್ಯ ಎಂ ಅವರು ಮಾತನಾಡಿ, ಕೆರೆಗಳನ್ನು ತುಂಬಿಸಲು ಜನರ ಸಹಕಾರ ಅಗತ್ಯವಾಗಿದೆ. ಯಾವುದೇ ಕಡೆಗಳಲ್ಲಿ ಅವಘಡಗಳಾಗದಂತೆ ಪೊಲೀಸ್ ಇಲಾಖೆಯ ಸಹಯೋಗದಲ್ಲಿ ಕೆರೆಗಳನ್ನು ತುಂಬಿಸಲು ಪೊಲೀಸ್ ಇಲಾಖೆಯಿಂದ ಅಗತ್ಯ ಸಹಕಾರ ನೀಡುವುದಾಗಿ ತಿಳಿಸಿದರು.

ಅಪರ ಜಿಲ್ಲಾಧಿಕಾರಿಗಳಾದ ಶಿವಾನಂದ ಅವರು ಮಾತನಾಡಿ, ದೇವದುರ್ಗ, ಲಿಂಗಸೂರ, ಮಾನವಿ, ರಾಯಚೂರ, ಸಿಂಧನೂರ ಮತ್ತು ಮಸ್ಕಿ ಹಾಗೂ ಸಿರವಾರ ಸೇರಿ ಒಟ್ಟು 265 ಕೆರೆಗಳ ಪೈಕಿ ಈಗಾಗಲೇ 44 ಕೆರೆಗಳನ್ನು ಪೂರ್ಣಪ್ರಮಾಣದಲ್ಲಿ ತುಂಬಿಸಲಾಗಿದೆ. 197 ಕೆರೆಗಳು ಭಾಗಶಃ ತುಂಬಿವೆ. 21 ಕೆರೆಗಳನ್ನು ತುಂಬಿಸುವುದು ಇನ್ನು ಬಾಕಿ ಎಂದು ಸಭೆಗೆ ಮಾಹಿತಿ ನೀಡಿದರು.

ಮುಂಬರುವ ತಿಂಗಳುಗಳಲ್ಲಿ ಕುಡಿಯುವ ನೀರಿನ ಕೊರತೆ ಎದುರಾಗಬಹುದಾದ ಗ್ರಾಮಗಳು ದೇವದುರ್ಗ ತಾಲೂಕಿನಲ್ಲಿ 69, ಲಿಂಗಸೂರ ತಾಲೂಕಿನಲ್ಲಿ 29, ಮಾನವಿ ತಾಲೂಕಿನಲ್ಲಿ 7, ರಾಯಚೂರ ತಾಲೂಕಿನಲ್ಲಿ 17, ಸಿಂಧನೂರ ತಾಲೂಕಿನಲ್ಲಿ 19, ಮಸ್ಕಿ ತಾಲೂಕಿನಲ್ಲಿ 55, ಸಿರವಾರ ತಾಲೂಕಿನಲ್ಲಿ 56 ಇರುತ್ತವೆ ಎಂದು ಅಂದಾಜಿಸಲಾಗಿದೆ ಎಂದು ಆಯಾ ತಾಲೂಕಿನ ಅಧಿಕಾರಿಗಳು ಸಭೆಗೆ ಮಾಹಿತಿ ನೀಡಿದರು.

ಕುಡಿಯುವ ನೀರಿನ ಕೊರತೆಯಾಗಬಹುದು ಎಂದು ಹೆಚ್ಚಿನ ನೀರು ಪೂರೈಸಬಹುದು ಎಂದು ದೇವದುರ್ಗ ತಾಲೂಕಿನಲ್ಲಿ ಈಗಾಗಲೇ 71 ಬೋರವೆಲ್‌ಗಳು, ಮಾನ್ವಿ ಹಾಗೂ ಸಿಂಧನೂರ ತಾಲೂಕುಗಳಲ್ಲಿ ತಲಾ 7 ಹಾಗೂ ಮಸ್ಕಿ ತಾಲೂಕಿನಲ್ಲಿ 29 ಮತ್ತು ಸಿರವಾರ ತಾಲೂಕಿನಲ್ಲಿ 30 ಖಾಸಗಿ ಬೋರವೆಲಗಳನ್ನು ಒಪ್ಪಂದಕ್ಕಾಗಿ ಗುರುತಿಸಲಾಗಿದೆ ಎಂದು ಆಯಾ ತಾಲೂಕಿನ ತಹಸೀಲ್ದಾರರು ಸಭೆಗೆ ಮಾಹಿತಿ ನೀಡಿದರು.

ಸಭೆಯಲ್ಲಿ ತಾಲೂಕುವಾರು ನೋಡಲ್ ಅಧಿಕಾರಿಗಳೆಂದು ನೇಮಕವಾದ ಸಹಾಯಕ ಆಯುಕ್ತರಾದ ಗಜಾನನ ಬಾಲೆ, ಬಸವಣಪ್ಪ ಕಲಶೆಟ್ಟಿ, ಜಿಲ್ಲಾ ಪಂಚಾಯತ್ ಕಾರ್ಯದರ್ಶಿ ಶಶಿಕಾಂತ ಶಿವಪುರೆ, ಜಿಲ್ಲಾ ಪಂಚಾಯತ್ ಯೋಜನಾ ನಿರ್ದೇಶಕರಾದ ಶರಣಬಸವ ರಾಜ ಕೆಸರಟ್ಟಿ, ಕೃಷಿ ಇಲಾಖೆಯ ಜಂಟಿ ನಿರ್ದೇಶಕರಾದ ಜಯಪ್ರಕಾಶ ಸಿ..ಟಿ., ಸಮಾಜ ಕಲ್ಯಾಣ ಇಲಾಖೆಯ ಉಪ ನಿರ್ದೇಶಕರಾದ ಚಿದಾನಂದ ಹಾಗೂ ಇನ್ನಿತರ ಇಲಾಖೆಗಳ ಅಧಿಕಾರಿಗಳು ಇದ್ದರು.

## SSLC ಈ ಬಾರಿ ಫಲಿತಾಂಶ ನಮ್ಮದೆ ಹೈಸ್ಕೋರ್‌ಗೆ

HAMPI TIMES MARGADARSHI

ಈಗಿಂದಲೇ ಪುನರ್‌ಮನನ ಮಾಡಿ

ಪರೀಕ್ಷೆಗೆ ಕೇವಲ ಬರಿ 15 ದಿನ

ಮನಸ್ಸು ಮಾಡು-ಕರ್ತವ್ಯ ನಿಷ್ಠನಾಗು-ಕಾದು ನೋಡು

https://epaper.hampitimes.com

ನಿನ್ನ ಏಣಿಗೆ ನೀನೆ ಶಿಲ್ಪಿ

ಹಂಪಿ ಟೈಮ್ಸ್ ಮಾರ್ಗದರ್ಶಿ SSLC : ಗಣಿತ

**ಸ್ಕೋರಿಂಗ್ ಪತ್ರಿಕೆ – 3**

ಈ ಕೆಳಗಿನ ಸಮಸ್ಯೆಗಳನ್ನು ಬಿಡಿಸಿ

1) $\sqrt{\frac{1-\sin\theta}{1+\sin\theta}} = \sec\theta - \tan\theta$

2) $\sqrt{\frac{1+\sin\theta}{1-\sin\theta}} = \sec\theta - \tan\theta$

3) $\sqrt{\frac{1-\cos\theta}{1+\cos\theta}} + \sqrt{\frac{1+\cos\theta}{1-\cos\theta}} = 2\operatorname{cosec}\theta$

4) $\sqrt{\frac{\sec\theta-1}{\sec\theta+1}} + \sqrt{\frac{\sec\theta+1}{\sec\theta-1}} = 2\operatorname{cosec}\theta$

5) $\frac{1-\sin\theta}{\cos\theta} + \frac{\cos\theta}{1-\sin\theta} = 2\sec\theta$

6) $\frac{1+\sin\theta}{\cos\theta} + \frac{1-\sin\theta}{\cos\theta} = 2\sec\theta$

7) ಸಮುದ್ರ ಮಟ್ಟದಿಂದ 75 ಮೀಟರ್ ಎತ್ತರದಲ್ಲಿರುವ ದೀಪಸ್ತಂಭವೊಂದರ ಮೇಲಿನಿಂದ ಎರಡು ಹಡಗುಗಳನ್ನು ನೋಡಿದಾಗ ಉಂಟಾದ ಅವನತ ಕೋನಗಳು $30^0$ ಮತ್ತು $45^0$ ಆಗಿವೆ. ದೀಪಸ್ತಂಭದ ಒಂದೇ ಪಾರ್ಶ್ವದಲ್ಲಿ ಒಂದು ಹಡಗಿನ ಹಿಂದೆ ಮತ್ತೊಂದಿದ್ದರೆ, ಆ ಎರಡು ಹಡಗುಗಳ ದೂರವನ್ನು ಕಂಡು ಹಿಡಿಯಿರಿ.

8) ನೆಲದಿಂದ 50 ಮೀಟರ್ ಎತ್ತರದಲ್ಲಿರುವ ಸ್ಥಳದಿಂದ, ಮೋಡವನ್ನು ನೋಡಿದಾಗ ಉಂಟಾದ ಉನ್ನತ ಕೋನ $30^0$ ಆಗಿರುತ್ತದೆ. ಹಾಗೆಯೇ ನೀರಿನಲ್ಲಿರುವ ಪ್ರತಿಬಿಂಬವನ್ನು ನೋಡದಾಗ ಉಂಟಾದ ಅವನತ ಕೋನವು $60^0$ ಆದರೆ ನೆಲದಿಂದ ಮೋಡವು ಇರುವ ಎತ್ತರವನ್ನು ಕಂಡು ಹಿಡಿಯಿರಿ

9) ಒಂದು ಲಂಬಕೋನ ತ್ರಿಭುಜದಲ್ಲಿ ವಿಕರ್ಣವು 13 ಸೆಂಟಿಮೀಟರ್ ಉದ್ದವಿದೆ ಉಳಿದೆರಡು ಬಾಹುಗಳಲ್ಲಿ ಒಂದು ಬಾಹುವು ಮತ್ತೊಂದು ಬಾಹುವಿಗಿಂತ ಏಳು ಸೆಂಟಿಮೀಟರ್ ಹೆಚ್ಚಾಗಿದ್ದರೆ ಆ ತ್ರಿಭುಜದ ಬಾಹುಗಳನ್ನು ಕಂಡುಹಿಡಿಯಿರಿ

10) ಒಂದು ತ್ರಿಭುಜದ ಎತ್ತರವು ಅದರ ಪಾದಕ್ಕಿಂತ 6cm ಹೆಚ್ಚಾಗಿದೆ ತ್ರಿಭುಜದ ವಿಸ್ತೀರ್ಣವು 108 ಚದುರ ಸೆಂ.ಮೀ. ಆದಾಗ ತ್ರಿಭುಜದ ಪಾದ ಮತ್ತು ಎತ್ತರಗಳನ್ನು ಕಂಡುಹಿಡಿಯಿರಿ (ಲಂಬಕೋನ ತ್ರಿಭುಜದ ವಿಸ್ತೀರ್ಣ ಸೂತ್ರ ಬಳಸಿ)

11) ಒಂದು ಕಾರು 360 ಕಿಲೋಮೀಟರ್ ದೂರವನ್ನು ಏಕರೂಪ ಜವದೊಂದಿಗೆ ಕ್ರಮಿಸುತ್ತದೆ ಅದರ ಜವವು 5 ಕಿ.ಮೀ /ಗಂಟೆ ಹೆಚ್ಚಾಗಿದ್ದರೆ ಅಷ್ಟೇ ದೂರವನ್ನು ಕ್ರಮಿಸಲು ಅದು ಒಂದು ಗಂಟೆ ಕಡಿಮೆ ತೆಗೆದುಕೊಳ್ಳುತ್ತಿತ್ತು ಕಾರಿನ ಜವವನ್ನು ಕಂಡುಹಿಡಿಯಿರಿ

6) ಒಂದು ಮೋಟಾರ್ ದೋಣಿಯ ಜವವು ನಿಶ್ಚಲ ನೀರಿನಲ್ಲಿ 18 ಕಿ.ಮೀ/ಗಂಟೆ ಆಗಿದೆ ಆ ದೋಣಿಯು ಪ್ರವಾಹಕ್ಕೆ ಎದುರಾಗಿ 24 ಕಿ.ಮೀ. ದೂರ ಚಲಿಸುತ್ತದೆ ಅದು ಪ್ರವಾಹದೊಡನೆ ಮೊದಲನೇ ಸ್ಥಾನಕ್ಕೆ ಹಿಂದಿರುಗಿಲು ತೆಗೆದುಕೊಳ್ಳುವ ಸಮಯಕ್ಕಿಂತ ಒಂದು ಗಂಟೆ ಹೆಚ್ಚಾಗಿದೆ ಹಾಗಾದರೆ ಪ್ರವಾಹದ ಜವವನ್ನು ಕಂಡುಹಿಡಿಯಿರಿ.

www.hampitimes.com - Hampi Times Margadarshi

ಮಾರ್ಗದರ್ಶಿ ಶಿಕ್ಷಕರು : ಎಂ.ಎಸ್.ಮಂಜುನಾಥ, ಶಿಕ್ಷಕರು, ಚಿಲುಗೋಡು, ಹಗರಿಬೊಮ್ಮನಹಳ್ಳಿ (ತಾ) ವಿಜಯನಗರ (ಜಿಲ್ಲೆ)

ಶ್ರೀ ಜಗದ್ಗುರು ಕೊಟ್ಟೂರುಸ್ವಾಮಿ ಸಂಸ್ಥಾನಮಠ, ಹೊಸಪೇಟೆ

**ಮೈಕ್ರೋ ನ್ಯೂಸ್**

## ಬೇಸಿಗೆಯಲ್ಲಿರಲಿ ಮುಂಜಾಗ್ರತೆ : ಡಾ. ಲಿಂಗರಾಜು

**ಹಂಪಿ ಟೈಮ್ಸ್ ಕೊಪ್ಪಳ**

ಜಿಲ್ಲೆಯಾದ್ಯಂತ ಪ್ರಸಕ್ತ ತಿಂಗಳಿನ ಬಿಸಿಲಿನ ಪ್ರಕರತೆ ಮತ್ತು ತೀರ್ವತೆ ಕಂಡುಬಂದ ಹಿನ್ನೆಲೆಯಲ್ಲಿ ಸಾರ್ವಜನಿಕರು, ಗರ್ಭಿಣಿಯರು, ಬಾಣತಿಯರು, ಹಾಗೂ ಮಕ್ಕಳ ಆರೋಗ್ಯದ ಬಗ್ಗೆ ಮುಂಜಾಗ್ರತ ಕ್ರಮಗಳನ್ನು ಕೈಗೊಳ್ಳುವಂತೆ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿ ಡಾ. ಲಿಂಗರಾಜು ಟಿ. ಅವರು ತಿಳಿಸಿದ್ದಾರೆ.

**ಮುಂಜಾಗ್ರತ ಕ್ರಮಗಳು:** ಬಿಸಿಯಾದ ಗಾಳಿ, ಶಾಕ ತರಂಗ (Heat wave) ದ ಸಂದರ್ಭಗಳಲ್ಲಿ ಆರೋಗ್ಯವನ್ನು ಕಾಪಾಡಿಕೊಳ್ಳಲು ಪಾಲಿಸಬೇಕಾದ ಮುಂಜಾಗ್ರತ ಕ್ರಮಗಳು ಇಂತಿವೆ. ಹೆಚ್ಚು ನೀರನ್ನು ಕುಡಿಯಿರಿ, ಮಜ್ಜಿಗೆ, ಎಳನೀರು, ಹಣ್ಣಿನ ರಸಗಳನ್ನು ಹೆಚ್ಚಾಗಿ ಸೇವಿಸಬಹುದು. ನೀರಿನ ಅಂಶ ಹೆಚ್ಚಾಗಿರುವ ತರಕಾರಿಗಳು ಹಾಗೂ ಹಣ್ಣುಗಳನ್ನು ಸೇವಿಸುವುದು ಉತ್ತಮ. ಸಡಿಲವಾದ ತೆಳುಬಣ್ಣದ ಹತ್ತಿಯ ಬಟ್ಟೆಗಳನ್ನು ಧರಿಸಿರಿ. ಗಾಳಿಯಾಡುವ ಪಾದರಕ್ಷೆಯನ್ನು ಧರಿಸಿರಿ. ಹೊರಗಡೆ ತೆರಳುವ ವೇಳೆ ತಂಪು ಕನ್ನಡಕ, ಛತ್ರಿ, ಟವೆಲ್ ಅಥವಾ ಬಿಸಿಲಿನಿಂದ ಕಾಪಾಡಿಕೊಳ್ಳವ ಸಾಮಾನ್ಯ ಕ್ರಮಗಳನ್ನು ಪಾಲಿಸಿ.

ರೇಡಿಯೋ, ದೂರದರ್ಶನ ಹಾಗೂ ದಿನಪತ್ರಿಕೆಗಳಲ್ಲಿ ಬಿಸಿಯಾದ ಗಾಳಿ, ಶಾಖ ತರಂಗದ ಬಗ್ಗೆ ನೀಡುವ ಮಾಹಿತಿ ಅನುಸಾರ ದೈನಂದಿನ ಚಟುವಟಿಕೆಗಳನ್ನು ಯೋಚಿಸಿಕೊಳ್ಳಿ. ಬಿಸಿಲಿನಲ್ಲಿ ಹೊರಗಡೆ ಕಾರ್ಯನಿರ್ವಹಿಸುವವರು (ಜಮೀನಿನ ಕೆಲಸ, ರಸ್ತೆ ಕಾಮಗಾರಿ ಮುಂತಾದವುಗಳು) ಆದಷ್ಟು ಬೆಳಗ್ಗೆ 11 ಗಂಟೆಯ ಒಳಗೆ ಮತ್ತು ಸಂಜೆ 4 ಗಂಟೆಯ ನಂತರ ಕೈಗೊಳ್ಳುವುದು ಉತ್ತಮ. ಬಿಸಿಲು ಹೆಚ್ಚಿರುವ ಅವಧಿಯಲ್ಲಿ ಶ್ರಮದಾಯಕ ಕೆಲಸಗಳಿಂದ ವಿಶ್ರಾಂತಿ ಪಡೆಯಿರಿ. ಬಿಸಿಲಿನಲ್ಲಿ ನಡೆಯುವಾಗ ಕಡ್ಡಾಯವಾಗಿ ಚಪ್ಪಲಿ ಧರಿಸಿ. ಟಿ, ಕಾಫಿ ಹೆಚ್ಚು ಸಕ್ಕರೆ ಅಂಶ ಹೊಂದಿರುವ ಕಾರ್ಬೋನೇಟೆಡ್ ಪಾನಿಯ ಹಾಗೂ ಮಧ್ಯಪಾನದಿಂದ ದೂರವಿರಿ. ವ್ಯಕ್ತಿ ತೊದಲು ಮಾತು ಅಥವಾ ಅರ್ಥ ರಹಿತವಾಗಿ ಬಡಬಡಿಸಿದ್ದಲ್ಲಿ ಕೂಡಲೆ ನೆರಳಿನ ಸ್ಥಳಕ್ಕೆ ಸ್ಥಳಾಂತರಿಸಿ. ಕೆಳಗೆ ಮಲಗಿಸಿ ಕಾಲುಗಳನ್ನು ಮೇಲಕ್ಕೆ ಎತ್ತಿ ವಿಶ್ರಾಂತಿ ಪಡೆಯಬೇಕು. ಬಿಸಿಗಾಳಿ ಮತ್ತು ಅತೀಯಾದ ತಾಪಮಾನದಿಂದ ಆರೋಗ್ಯ ಸಮಸ್ಯೆಗಳು ಉಂಟಾದಲ್ಲಿ ಸಮೀಪದ ಆರೋಗ್ಯ ಕೇಂದ್ರವನ್ನು ಸಂಪರ್ಕಿಸಿ, 108 ಅಥವಾ 102ಕ್ಕೆ ಕರೆ ಮಾಡಬಹುದಾಗಿದೆ ಎಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳ ಕಾರ್ಯಾಲಯದ ಪ್ರಕಟಣೆ ತಿಳಿಸಿದೆ.

# ಬೆನ್ನುಹುರಿ ಕಾಯಿಲೆಗೆ ಉಚಿತ ಚಿಕಿತ್ಸೆ

## ಡಿಎಚ್ಒ ಡಾ.ಎಲ್.ಆರ್. ಶಂಕರ್ ನಾಯ್ಕ ಹೇಳಿಕೆ। ಬೆನ್ನುಹುರಿ ನಿರ್ಲಕ್ಷಿಸಿದರೆ ಹಲವು ಸಮಸ್ಯೆಗಳು ಎದುರಾಗಲಿವೆ

**ಹಂಪಿ ಟೈಮ್ಸ್ ಹೊಸಪೇಟೆ**

ಬೆನ್ನುಹುರಿ ಅಪಘಾತದಿಂದ ನರಗಳಿಗೆ ಆಕಸ್ಮಿಕವಾಗಿ ಆಗುವ ಘಟನೆಗಳ ಮತ್ತು ಬೆನ್ನು ಮೂಳೆ ಕ್ಷಯ ಲಕ್ಷಣಗಳು ಪತ್ತೆಯಾದರೇ ವೈದ್ಯರ ಬಳಿ ಸೂಕ್ತ ಚಿಕಿತ್ಸೆಗೆ ಮುಂದಾಗಬೇಕೆಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಎಲ್.ಆರ್. ಶಂಕರ್ ನಾಯ್ಕ ಹೇಳಿದರು.

ನಗರದ ತಾಲ್ಲೂಕು ಆರೋಗ್ಯಧಿಕಾರಿ ಕಚೇರಿ ಸಭಾಂಗಣದಲ್ಲಿ ಏರ್ಪಡಿಸಿದ್ದ ಬೆನ್ನುಹುರಿ ಅಪಘಾತ ಮತ್ತು ನಿರ್ವಹಣಾ ಶಿಬಿರ ಬುಧವಾರ ಉದ್ಘಾಟಿಸಿ ಮಾತನಾಡಿದರು. ಮನುಷ್ಯನ ಬೆನ್ನಿನ ಭಾಗದಲ್ಲಿ ಮೆದುಳಿನಿಂದ ಗುದದ್ವಾರರವರೆಗೂ ಒಟ್ಟು 33 ಗಂಟುಗಳನ್ನು ಒಳಗೊಂಡಿರುತ್ತದೆ. ಮಧ್ಯಭಾಗದಲ್ಲಿ ಹಗ್ಗದ ರೀತಿಯಲ್ಲಿ ಹಾದು ಹೋಗುವ ನೋವನ್ನು ಬೆನ್ನುಹುರಿ ಎನ್ನುತ್ತೇವೆ. ಈ ಮೂಳೆಗಳ ಮಧ್ಯಭಾಗದಲ್ಲಿ ಎರಡು ಮುಖ್ಯವಾದ ಜ್ಞಾನವಾಹಿ ಮತ್ತು ಕ್ರಿಯಾವಾಯಿ ನರಗಳಿದ್ದು ಇವು ಮೆದುಳಿನಿಂದ ದೇಹದ ಎಲ್ಲಾ ಭಾಗಗಳಿಗೂ ಸಂದೇಶ ರವಾನಿಸುವ ಮತ್ತು ಸ್ವೀಕರಿಸುವ ಕಾರ್ಯನಿರ್ವಹಿಸುವಲ್ಲಿ ಮಹತ್ವದ ಪಾತ್ರ ವಹಿಸುತ್ತವೆ. ಈ ನರಗಳಿಗೆ ಆಕಸ್ಮಿಕವಾಗಿ ಆಗುವ ಘಟನೆಗಳಿಂದ ಮತ್ತು ಬೆನ್ನು



ಮೂಳೆ ಕ್ಷಯ ಕಾಯಿಲೆಯಿಂದ ಬೆನ್ನು ಹುರಿಗೆ ಆಘಾತವಾದಾಗ ಅಲ್ಲಿನ ಕೆಳಭಾಗದ ಮನುಷ್ಯನ ದೇಹದ ಎಲ್ಲಾ ಕಾರ್ಯಗಳು ಸ್ಥಗಿತವಾಗುತ್ತವೆ. ಇದರಿಂದ ಬಳಲು ವವರು ಮಾನಸಿಕ ಒತ್ತಡ ಅಥವಾ ಹಾಸಿಗೆ ಗಾಯ ಮೂತ್ರನಾಳದ ಸೋಂಕು ಕಾಯಿಲೆ ಜಿಗಿತನ ಊತ ಮತ್ತು ಮಲಬದ್ಧತೆ ಸಮಸ್ಯೆಗಳಿಂದ ಬಳಲುತ್ತಾರೆ. ಬೆನ್ನುಹುರಿ ಅಪಘಾತ ವ್ಯಕ್ತಿಗೆ ಕಾಯಿಲೆಯ ಲಕ್ಷಣಗಳು ಮತ್ತು ಅವರಿಗೆ ಅವಶ್ಯವಿರುವ ಆರೈಕೆ ಮತ್ತು ವೈದ್ಯಕೀಯ ನಿರ್ವಹಣೆ ಬಗ್ಗೆ ಅರಿವು ಮೂಡಿಸುವ ಉದ್ದೇಶ ಈ ಶಿಬಿರದಿಂದ ಆಗಲಿದೆ.

ದಿ ಅಸೋಸಿಯೇಷನ್ ಆಫ್ ಪೀಪಲ್ ವಿತ್ ಡಿಸೆಬಿಲಿಟಿ ಸಹಯೋಗದಲ್ಲಿ ವಿಜಯನಗರ ಜಿಲ್ಲೆಯಲ್ಲಿ ಈ ಕಾಯಿಲೆಗೆ ಗುರಿಯಾಗಿರುವ ರೋಗಿಗಳು ಉಚಿತ ವಾಗಿ ಚಿಕಿತ್ಸೆಯನ್ನು ಪಡೆದು ಕೊಂಡು ಉತ್ತಮವಾದ ಭವಿಷ್ಯ ಪಡೆದುಕೊಳ್ಳಬೇಕು. ಚಿಕಿತ್ಸೆಯಿಂದ ಯಾವುದೇ ತೊಂದರೆಗಳಾಗದಂತೆ ಚಿಕಿತ್ಸೆಯನ್ನು ಯಶಸ್ವಿಯಾಗಿ ನೀಡುತ್ತಾರೆ. ಮತ್ತು ಹಣಕಾಸಿನ ತೊಂದರೆ ತುಂಬಾ ಜನರಲ್ಲಿ ಕಂಡುಬರುವುದರಿಂದ ಈ ಸಂಸ್ಥೆ ಸಮಾಜ ಸೇವೆಯ ಮೂಲಕ ಉಚಿತವಾಗಿ ಚಿಕಿತ್ಸೆಯನ್ನು ನೀಡಲಾಗುವುದು ಎಂದರು.

ತಾಲೂಕು ಆರೋಗ್ಯ ಅಧಿಕಾರಿ ಡಾ.ಬಸವರಾಜ ಮಾತನಾಡಿ, ಬೆನ್ನುಹುರಿ ಇರುವ ವ್ಯಕ್ತಿಗಳು ಮತ್ತು ಪೋಷಕರು ಜಾಗೃತಿ ವಹಿಸಬೇಕು. ವೈದ್ಯರ ಸಲಹೆಗಳನ್ನು ತಪ್ಪದೇ ಅನುಸರಿಸಬೇಕು. ಮೌಢ್ಯತೆಯಿಂದ ಅವೈಜ್ಞಾನಿಕ ಪದ್ಧತಿಗಳನ್ನು ಪಾಲಿಸುವುದು. ನಾಟಿ ಔಷಧಿಗಳನ್ನು ಬಳಸುವುದು ಕೈಬಿಡಬೇಕು. ನಿತ್ಯ ನಿಯಮಿತ ವ್ಯಾಯಾಮವನ್ನು ತಪ್ಪದೇ ಮಾಡಬೇಕು ಎಂದರು.

ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಎಂ.ಪಿ.ದೊಡ್ಡಮನಿ ಮಾತನಾಡಿ, ಬೆನ್ನುಹುರಿ ಅಪಘಾತಕ್ಕೆಗೊಳಗಾದ ವ್ಯಕ್ತಿ ಪ್ರತಿ ಮೂರು ತಿಂಗಳಿಗೊಮ್ಮೆ ವೈದ್ಯಕೀಯ ಚಿಕಿತ್ಸೆ ಮಾಡಿಸಿ ವೈದ್ಯರ ಬಳಿ ಸೂಕ್ತ ಸಲಹೆಗಳನ್ನು ಪಡೆದುಕೊಳ್ಳಬೇಕು ಎಂದರು.

ಈ ವೇಳೆ ದಿ ಅಸೋಸಿಯೇಷನ್ ಆಫ್ ಪೀಪಲ್ ವಿತ್ ಡಿಸೆಬಿಲಿಟಿ(ಎಪಿಡಿ) ಸಂಸ್ಥೆಯ ಮುಖ್ಯಸ್ಥರು, ವೈದ್ಯಾಧಿಕಾರಿಗಳು, ಆಶಾ ಮೇಲ್ವಿಚಾರಕರು ಹಾಗೂ ಆಶಾ ಕಾರ್ಯಕರ್ತೆಯರು ಸಿಬ್ಬಂದಿಗಳು ಭಾಗವಹಿಸಿದ್ದರು.

# ಮಡಿವಾಳ ಮಾಚಿದೇವರ ತತ್ವ ಸಂದೇಶಗಳನ್ನ ಜೀವನದಲ್ಲಿ ಅಳವಡಿಸಿಕೊಳ್ಳಿ: ಅಮ್ಜದ್ ಪಟೇಲ್

**ಹಂಪಿ ಟೈಮ್ಸ್ ಕೊಪ್ಪಳ**

ಮಡಿವಾಳ ಸಮಾಜವು ಉನ್ನತ ಮಟ್ಟದ ಸ್ಥಾನ ತಲುಪಬೇಕಾದರೆ, ಶ್ರೀ ಮಡಿವಾಳ ಮಾಚಿದೇವರು ಹಾಕಿ ಕೊಟ್ಟಿರುವ ತತ್ವ ಸಂದೇಶಗಳನ್ನು ಜೀವನದಲ್ಲಿ ಅಳವಡಿಕೆ ಮಾಡಿಕೊಂಡಾಗ ಮಾತ್ರ ಸಾಧ್ಯವಾಗಿದೆ ಎಂದು ಕೊಪ್ಪಳ ನಗರಸಭೆ ಅಧ್ಯಕ್ಷ ಅಮ್ಜದ ಪಟೇಲ್ ಹೇಳಿದರು.

ಅವರು ಬುಧವಾರ ಕೊಪ್ಪಳ ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ನಗರಸಭೆ ಕೊಪ್ಪಳ ಇವರ ಸಂಯುಕ್ತಾಶ್ರಯದಲ್ಲಿ ನಗರದ ಸಾಹಿತ್ಯ ಭವನದಲ್ಲಿ ಹಮ್ಮಿಕೊಂಡಿದ್ದ ಶ್ರೀ ಮಡಿವಾಳ ಮಾಚಿದೇವ ಜಯಂತಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು ಮಡಿವಾಳ ಮಾಚಿದೇವ ರವರು 12ನೇ ಶತಮಾನದಲ್ಲಿ ಬಿಜಾಪುರ ಜಿಲೆಯ ಸಿಂಧಗಿ



ತಾಲೂಕಿನ ದೇವರ ಹಿಪ್ಪರಗಿಯಲ್ಲಿ' ಪರುವತಯ್ಯ ಮತ್ತು ಸುಜ್ಞಾನವ್ವ ದಂಪತಿಗಳ ಪುತ್ರ ರತ್ನ –ಶರಣ ಕಿರಣನಾಗಿ ಜನಿಸಿದರು. ಮಡಿವಾಳ ಮಾಚಿದೇವ ಕನ್ನಡದ ಶಿವಶರಣರಲ್ಲಿಯೆ ಅತ್ಯಂತ ಹಿರಿಯರು. ಬಸವಣ್ಣನವರು ಕಾಲ್ಯಾಣದಲ್ಲಿ ಅನುಭವ ಮಂಟಪ ಕಟ್ಟುವಲ್ಲಿ ಮಡಿವಾಳ ಮಾಚಿದೇವರ ಕಾಯಕ ಅತಿ ಮಹತ್ವದ್ದು. ದೇಶದ ನಾನಾ ಭಾಗಗಳಿಂದ ಕಲ್ಯಾಣಕ್ಕೆ ಬರುವವರಿಗೆ ಪರೀಕ್ಷಿಸಿ, ಸ್ವಾಗತಿಸುವ ಕೆಲಸ ಅವರದಾಗಿತ್ತು. ಅವರು ಕೇವಲ ಬಟ್ಟೆಯ ಮೇಲೆನಿ ಮೈಲಿಗೆಯನ್ನ ತೋಳೆಯದೇ, ಅದ್ಭುತ ವಚನಗಳ ಮೂಲಕ ಮನಸ್ಸಿಗೆ ಅಂಟಿಕೊಂಡಿರುವ ಕೋಳೆಯನ್ನ ತೋಳೆಯು ಕಾಯಕ ಮಾಡಿದರು. ಅವರು ರಚಿಸಿರುವ ವಚನಗಳಲ್ಲಿ 300 ವಚನಗಳು ದೊರಕಿವೆ ಎಂದರು.

ಕಾರ್ಯಕ್ರಮದ ದಿವ್ಯ ಸಾನಿಧ್ಯ ವಹಿಸಿದ ಚಿತ್ರದುರ್ಗ ಸಂಸ್ಥಾನ ಮಠದ ಶ್ರೀ ಜಗದ್ಗುರು ಡಾ. ಬಸವ ಮಾಚಿದೇವ ಸ್ವಾಮಿಜಿ ಮಾತನಾಡಿ, ಮಡಿವಾಳ ಮಾಚಿದೇವ ಅವರು ತಮ್ಮ ಕಾಯಕ ಮತ್ತು ವಚನಗಳ ಮೂಲಕ, ಸಮಸ್ತ ಮಾನವ ಕುಲಕ್ಕೆ ಆದರ್ಶವಾಗಿದ್ದಾರೆ ಎಂದರು.

ಕೊಪ್ಪಳ ಸರ್ಕಾರಿ ಪ್ರಥಮ ದರ್ಜೆಯ ಕಾಲೇಜಿನ ಸಹಾಯಕ ಪ್ರಾಧ್ಯಾಪಕರಾದ ಡಾ.ನವೀನ್ ಕುಮಾರ್ ಬಿ. ಉಪನ್ಯಾಸ ನೀಡಿದರು. ಮಡಿವಾಳ ಸಮಾಜದ ಪ್ರಮುಖರಾದ ಯೋಗೇಶ್ ಮಡಿವಾಳರ ಹಿಟ್ನಾಳ ಅವರು ಪ್ರಾಸ್ತಾವಿಕವಾಗಿ ಮಾತನಾಡಿದರು.

ಕಾರ್ಯಕ್ರಮದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯ ನಿರ್ದೇಶಕ ಕೊಟ್ರೇಶ್ ಮರಬನಳ್ಳಿ, ಜನಪ್ರತಿನಿಧಿಗಳು ಸೇರಿದಂತೆ ಇಲಾಖೆಗಳ ಅಧಿಕಾರಿ, ಸಿಬ್ಬಂದಿಗಳು ಉಪಸ್ಥಿತರಿದ್ದರು.

ಹಂಪಿ ಟೈಮ್ಸ್
ವಿಜಯನಗರದ ಹೆಮ್ಮೆ
ಕನ್ನಡ ದಿನಪತ್ರಿಕೆ

BOOK YOUR ADS REACH MORE READERS
HAMPI TIMES
PRINT & DIGITAL
DAILY NEWS PAPER



BOOK NOW
94486 33038
Email: hampitimes@gmail.com

Book All Types of legal /Public Notice Display Ads
IN NEWSPAPER @ AFFORDABLE PRICE
Property Purchase Notice - Lost & Found Notice -
Summons Notice - Tender/E-Tender Notice - E-Auction Notice Etc..